KA / BG-GPO / 2515 / WPP-47 / 2006-2008



ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೨	ಬೆಂಗಳೂರು, ಗುರುವಾರ, ನವೆಂಬರ್ ೨೯, ೨೦೦೭ (ಮಾರ್ಗಶಿರ ೮, ಶಕ ವರ್ಷ ೧೯೨೯)	ಸಂಚಿಕೆ ೪೭

ಭಾಗ – ೪

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

OFFICE OF THE EXECUTIVE ENGINEER P.W.D. KOLAR DIVISION, KOLAR
TENDER NOTIFICATION No.42/2007-08/ Dated: 2nd November 2007
TENDER NOTIFICATION 1st Call (In two cover system)

Sealed Item Rate tenders for the works noted below under TWO COVER BID SYSTEM as per the Karnataka Transparency in public procurement act-2000 in prescribed forms in duplicate is invited from class-1 contractors registered in K.P.W.D/MORT&H approved firms. Two Cover bid system of tendering consists of Technical Bid and Financial Bid. These two covers shall be sealed and kept in another sealed cover duly super subscribing name of the cover and shall be addressed to the under signed with name and full postal address of the bidder. Completed bids will be received in the office of The Chief Engineer, C&B (S), Bangalore-1, Office of the Superintending Engineer PWD Bangalore circle, Bangalore-9 & O/o The Executive Engineer, PWD Kolar Division, Kolar up to 4.00 PM on 5.12.2007 and Technical Bids will be opened in the office of the under signed in presence of Bidders or Authorised representative on 06.12.2007 at 4.00 PM. The contractors who are qualified in technical bids their financial bids opening date will be intimated. The subject of conditions laid down in the form PWG.65, 66 of KPWD code Vol. II, special conditions contained in the schedules and in Karnataka Transparency in Public Procurement act 2000.

Sl. No.	Name of Work	Approx. Amount put to tender in Lakhs	E.M.D to be paid in
1.	Improvements & Widening of road Vemagal to Kaiwara cross via Seethi, Thippenahalli, Kadahalli Krishnapura & Muthukadahalli in Kolar Taluk & District	150.00	150000.00
2.	Construction of Four Lanes road of SH-96 (Vemagal village Limit) at Ch: 36.00 to 37.00 Km in Devanahalli - Kempapura road in Kolar Taluk & District.	130.00	130000.00

A.	Last Date of receipt of application for issue of tender forms 10.00 AM to 5.30-PM.	2.11.2007 to 3.12.2007

B.	Last Date for issue of tender forms Morning 10.00 AM to evening 5.30 PM.	2.11.2007 to 3.12.2007
C.	Last Date of submission of sealed tenders forms Morning 10.00 AM to evening 4.00 PM.	5.12.2007
D.	Cost of tender form per set (not refundable & Transferable) to be paid in cash or DD.	Rs.15000.00 including all Taxes
E.	Class of Registration of Contractors eligible to Tender.	Class-I
F.	Time limit for completion of work including Monsoon.	12 Months.

GENERAL CONDITIONS

1. The Contrators interested in bidding for the works may submit an application to the under signed along with cost of tender documents (non refundable) to be paid in cash or in the form of DD drawn in favour The Executive Engineer, PWD Kolar Division, Kolar, payable at Kolar along with the application. The applicant should submit proof of registration, relevant experience certificate issued by the Officer not below the rank of Executive Engineer while submitting the application for Tender Schedules, otherwise the application may not be considered.

CONDITIONS FOR TECHNICAL BIDS:

1. The E.M.D. in the form of D.D./F.D.R. / Pay Order /Bank Guarantee drawn from a Nationalized Bank or Scheduled Banks or NSC (Pledged in favour of the under signed) to be enclosed with the Technical Bid. The Bank Guarantee shall be in the prescribed form other wise tenders will be rejected all types of EMD should be valid for 180 Days from the date of opening fixed for the Tender other wise such tenders will be rejected.
2. Each Tender should have individually satisfactorily completed works of single similar nature of road work (By using Hot Mix plant 40/60 TPH & Paver Finisher) of value not less than 30% of the value of work in this notification (Updated at 10% per annum compoundable) in any one financial year during a block period of previous five years. The experience certificate in this regard should invariably have mention of nature / item of work executed, along with date of commencement and date of completion by the competent authority not below the rank of Executive Engineer, otherwise the technical bid is liable for disqualification. (For Road works)
3. For proof of Financial capacity Line of credit from any Scheduled Bank shall be invariably produced for the particular work in the proforma prescribed in the technical bid for an amount equal to 30% of amount put to tender. Failure to submit the line of credit along with Technical bid lead to disqualification.
4. Special Note: The defect liability period for the works in this notification will be TWO years reckoned from the date of completion of the work.
5. All documents enclosed in support of Technical Bids shall be attested by the Notary / Gazetted Officer other wise the bids are liable for disqualification. The original documents should be produced for verification at any stage of tender process as and when sought for. Failure to produce original documents leads to disqualification of technical bids.
6. Only relevant certificates and details shall be furnished with the technical bids. Details of company / Agencies / Firms profile be enclosed.
7. Tendering by joint venture is not allowed.
8. The Competent authority reserves the right to reject any or all tenders without assigning any reasons.
9. The intending Tenderer should produce contractors registration passbook invariably at the time of purchasing blank tender forms otherwise blank tender's forms will not be issued.
10. Tender validity period for this works is 90 Days from the date of opening of the Tenders.
11. Conditional tenders will not be accepted.
12. All documents enclosed as above shall be page numbered and index shall also be enclosed.

13. If any dates mentioned above happens to be General Holiday, the next working day will hold good in lieu of the date mentioned.

Any further details can be had from the Division Office on all working days during office hours.

Executive Engineer,
P.R. 697 P.W.D. Kolar Division, Kolar.

ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಅರಣ್ಯ ತಾಂತ್ರಿಕ ಮತ್ತು ಆಡಳಿತ ತರಬೇತಿ ಸಂಸ್ಥೆ,
ಕಾಡುಗೋಡಿ, ಬೆಂಗಳೂರು, ಐ.ಟಿ.ಪಿ.ಎಲ್. ಎದುರು, ವೈಟ್ ಫೀಲ್ಡ್ ಮುಖ್ಯ ರಸ್ತೆ,
ಮಹದೇವಪುರ ಅಂಚೆ, ಬೆಂಗಳೂರು–048.

ಟೆಂಡರ್ ಪ್ರಕಟಣೆ

ಸಂಖ್ಯೆ: ಉ.ಅ.ಸಂ./ತರಬೇತಿ/ಟೆಂಡರ್/ಸಿಆರ್–06/07-08, ದಿನಾಂಕ: 12ನೇ ನವೆಂಬರ್ 2007.

ಅರಣ್ಯ ತಾಂತ್ರಿಕ ಮತ್ತು ಆಡಳಿತ ತರಬೇತಿ ಸಂಸ್ಥೆ, ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಮೇಲ್ಕಾಣಿಸಿದ ಅಧಿಕಾರಿಗಳ ಕಛೇರಿಗೆ ಶೆಡ್ಯೂಲ್‌ನಲ್ಲಿ ತೋರಿಸಿರುವ ಊಟ, ತಿಂಡಿಗಳನ್ನು ಮತ್ತು ಲಘು ಉಪಾಹಾರವನ್ನು ಸರಬರಾಜು ಮಾಡುವುದು ಹಾಗೂ ತರಬೇತಿಗೆ ಸಂಬಂಧಿಸಿದ ಇತರೆ ಕೆಲಸಗಳಿಗೆ ಸಂಬಂಧಿಸಿದಂತೆ ಅರಣ್ಯ ತರಬೇತಿ ಸಂಸ್ಥೆಯಲ್ಲಿ ಅಥವಾ ಅರಣ್ಯ ಇಲಾಖೆಯಲ್ಲಿ 2007-08ನೇ ಸಾಲಿನಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಾಯಿಸಲ್ಪಟ್ಟ ಹಾಗೂ ಈ ಕೆಲಸದಲ್ಲಿ ಅನುಭವವುಳ್ಳ ಅರಣ್ಯ ಗುತ್ತಿಗೆದಾರರಿಂದ ತರಬೇತಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಮೇಲಾಧಿಕಾರಿಗಳಿಂದ ಮಂಜೂರಾದ ದರಗಳ ಆಧಾರಿತ ಅಂದಾಜು ಪಟ್ಟಿಯಲ್ಲಿ ಕಾಣಿಸಿದ ಒಟ್ಟಾರೆ ಕೆಲಸಕ್ಕೆ ಗೊತ್ತು ಪಡಿಸಿದ ಟೆಂಡರ್ ಫಾರಂಗಳಲ್ಲಿ ಮೊಹರು ಬಂದ ಟೆಂಡರ್‌ಗಳನ್ನು ದಿನಾಂಕ: 14/12/07 ರಂದು ಮಧ್ಯಾಹ್ನ 3-00 ಗಂಟೆವರೆಗೆ ಆಹ್ವಾನಿಸಲಾಗಿದೆ. ಒಂದು ವೇಳೆ ಕಾರಣಾಂತರ ದಿನಾಂಕ: 14/12/07 ರಂದು ಯಾವುದೇ ಟೆಂಡರ್ ಜರುಗದೇ ಇದ್ದಲ್ಲಿ ಅಥವಾ ಯಾವುದೇ ಗುತ್ತಿಗೆದಾರರು ಭಾಗವಹಿಸದೇ ಇದ್ದಲ್ಲಿ ಅಥವಾ ಟೆಂಡರ್ ಒಪ್ಪಿಗೆಯಾಗದಿದ್ದಲ್ಲಿ ಅಥವಾ ಭಾಗಶ: ಕಾರ್ಯಗಳಿಗೆ ಟೆಂಡರು ಬಂದಲ್ಲಿ ಮರು ಟೆಂಡರು ದಿನಾಂಕ: 22/12/07 ರಂದು ಮದ್ಯಾಹ್ನ 3.00 ಗಂಟೆಗೆ ಜರುಗಿಸಲಾಗುವುದು. ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆಯಾಗಿದ್ದ ಪಕ್ಷದಲ್ಲಿ ಮರುದಿನ ಕೆಲಸ ದಿನಾಂಕಗಳಂದು ಟೆಂಡರ್ ನೀಡಬಹುದಾಗಿರುತ್ತದೆ.

ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸುವಾಗ ಅರ್ಜಿದಾರರು ಟೆಂಡರ್ ನಿಬಂದನೆಗಳಲ್ಲಿ ಕಾಣಿಸಿರುವ ಅರ್ಹತೆಯ ಬಗ್ಗೆ ಅಗತ್ಯ ದಾಖಲೆಗಳನ್ನು ಸಲ್ಲಿಸತಕ್ಕದ್ದು.

1. ಖಾಲಿ ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸುವ ದಿನಾಂಕ: 12/12/07 ಮದ್ಯಾಹ್ನ 4.00 ವರೆಗೆ
2. ಅರ್ಜಿ ಸಲ್ಲಿಸಿರುವ ಅರ್ಹ ಗುತ್ತಿಗೆದಾರರಿಗೆ ಖಾಲಿ ಟೆಂಡರ್ ಫಾರಂಗಳನ್ನು ವಿತರಿಸುವ ದಿನಾಂಕ: 13/12/07 ಮದ್ಯಾಹ್ನ 12.00 ರವರೆಗೆ ಕಛೇರಿ ವೇಳೆಯಲ್ಲಿ
3. ಭರ್ತಿ ಮಾಡಿದ ಮೊಹರಾದ ಟೆಂಡರ್ ಫಾರಂಗಳನ್ನು ಸ್ವೀಕರಿಸುವ ದಿನಾಂಕ: 14/12/07 ರ ಮದ್ಯಾಹ್ನ 3.00 ಗಂಟೆಯ ವರೆಗೆ
4. ಟೆಂಡರ್ ತೆರೆಯುವ ದಿನಾಂಕ: 14/12/07 ಮದ್ಯಾಹ್ನ 4.00 ವರೆಗೆ

ವಿವರವಾದ ಷರತ್ತುಗಳನ್ನು ಹಾಗೂ ಇನ್ನುಳಿದ ವಿವರಗಳನ್ನು ಈ ಕಛೇರಿಯಿಂದ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.

ನಿಬಂಧನೆಗಳು:

1. ಟೆಂಡರುದಾರರು 2007-08 ನೇ ಸಾಲಿನಲ್ಲಿ ಅರಣ್ಯ ಇಲಾಖೆಯಲ್ಲಿ / ಈ ತರಬೇತಿ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಅಥವಾ ಗುತ್ತಿಗೆದಾರತ್ವ ನವೀಕರಣಗೊಂಡಿರುವ ಅರಣ್ಯ ಗುತ್ತಿಗೆದಾರರಾಗಿರಬೇಕು. ಊಟೋಪಚಾರ (Catering) ಪೂರೈಕೆಯಲ್ಲಿ ಸಾಕಷ್ಟು ಅನುಭವವುಳ್ಳವರಾಗಿರಬೇಕು. (ದಾಖಲೆ ಸಹಿತ)
2. ಟೆಂಡರುಗಳನ್ನು ನಿರ್ದಿಷ್ಟ ಮುದ್ರಿತ ಫಾರ್ಮಿನಲ್ಲಿಯೇ ಕೊಡತಕ್ಕದ್ದು. ಇಂಥ ಫಾರಂಗಳನ್ನು ಈ ಕಾರ್ಯಾಲಯದಲ್ಲಿ ಪ್ರಕಟಣೆಯಲ್ಲಿ ಗೊತ್ತು ಪಡಿಸಿದ ದಿನಾಂಕದಂದು ಮದ್ಯಾಹ್ನ 12.00 ಘಂಟೆಯವರೆಗೆ ಪ್ರತಿ ಫಾರ್ಮಿಗೆ ರೂ. 500.00 (ರೂಪಾಯಿ ಐದು ನೂರು)+ಚಾಲ್ತಿಯಲ್ಲಿರುವ ತೆರಿಗೆಗಳನ್ನು ಪಾವತಿಸುವದೊಂದಿಗೆ ಪಡೆಯಬಹುದು. ನಿರ್ದಿಷ್ಟ ಮುದ್ರಿತ ಫಾರ್ಮಿನಲ್ಲಿ ಹಾಕದೇ, ಬೇರೆ ಬೇರೆ ಫಾರ್ಮಿನಲ್ಲಿ ಕೊಟ್ಟ ಟೆಂಡರುಗಳನ್ನು ಮಾನ್ಯ ಮಾಡುವುದಿಲ್ಲ. ಟೆಂಡರು ಫಾರ್ಮಗಳನ್ನು ವರ್ಗಾಯಿಸುವಂತಿಲ್ಲ ಮತ್ತು ಈ ಟೆಂಡರ್ ಫಾರಂ ಯಾವ ಕೆಲಸಕ್ಕಾಗಿ ಪಡೆಯಲಾಗಿದೆಯೋ ಅದೇ ಕೆಲಸಕ್ಕಾಗಿ ಮಾತ್ರ ಉಪಯೋಗಕ್ಕೆ ಬರುತ್ತದೆ. ಈ ಟೆಂಡರ್ ಫಾರಂ ಹಣ ಮರಳಿ ಪಾವತಿಸಲಾಗುವುದಿಲ್ಲ.
3. ಟೆಂಡರ್ ಫಾರಂಗಳನ್ನು ಸೀಲ್ ಮಾಡಿದ ಲಕೋಟೆಯಲ್ಲಿಟ್ಟು ಲಕೋಟೆಯ ಮೇಲೆ "**2007-08 ನೇ ಸಾಲಿಗೆ ಅರಣ್ಯ ತಾಂತ್ರಿಕ ಮತ್ತು ಆಡಳಿತ ತರಬೇತಿ ಸಂಸ್ಥೆ, ಬೆಂಗಳೂರು ಇಲ್ಲಿ ತರಬೇತಾರ್ಥಿಗಳಿಗೆ ಉಪಾಹಾರ/ಊಟ/ ಮತ್ತು ಇತರೆ ತರಬೇತಿ ಸಾಮಗ್ರಿಗಳ ಪೂರೈಕೆಯ ಬಗ್ಗೆ**" ಎಂದು ನಮೂದಿಸತಕ್ಕದ್ದು.
4. ಅನುಬಂಧ (ಶೆಡ್ಯೂಲ್)ನಲ್ಲಿ ವಿವರಿಸಿದ ಕೆಲಸಗಳು ಸರಿಯಾಗಿ ಇರುತ್ತವೆ ಎಂದು ಭಾವಿಸಿದರೂ ಕೂಡ ಟೆಂಡರುದಾರರು ಖುದ್ದಾಗಿ ತರಬೇತಿ ಸಂಸ್ಥೆಯ ಮೆಸ್, ಹಾಸ್ಟೇಲ್, ಅಡಿಗೆ ಮನೆ, ನೀರಿನ ಸೌಲಭ್ಯ ಹಾಗೂ ಇತರೆ

ವ್ಯವಸ್ಥೆಯ ಸ್ಥಳಗಳನ್ನು ಪರಿಶೀಲಿಸಿ ಖಾತ್ರಿ ಮಾಡಿಕೊಂಡು ಟೆಂಡರುಗಳನ್ನು ಕೊಟ್ಟಿರುವುದಾಗಿ ತಿಳಿಯಲಾಗುವುದು. ನಂತರ ಈ ವಿಷಯದಲ್ಲಿ ಏನಾದರೂ ವ್ಯತ್ಯಾಸ ಕಂಡು ಬಂದಲ್ಲಿ ಟೆಂಡರುದಾರರಿಗೆ ಯಾವುದೇ ಸಹಾಯ ಅಥವಾ ರಿಯಾಯಿತಿಯನ್ನು ಕೊಡಲಾಗುವುದಿಲ್ಲ.

5. ತಮ್ಮ ವ್ಯವಹಾರದಲ್ಲಿ ಮಾನಸಿಕ ಸ್ಥಿತಿಯು ಸರಿಯಾಗಿ ಇಲ್ಲದವರು, ಅನೈತಿಕ ವ್ಯವಹಾರ ಮಾಡಿದ್ದಕ್ಕಾಗಿ ಅಪರಾಧಿಯಾಗಿ ನ್ಯಾಯಾಲಯದಲ್ಲಿ ತಪ್ಪಿತಸ್ಥರೆಂದು ನಿರ್ಧರಿಸಲ್ಪಟ್ಟ ವ್ಯಕ್ತಿಗಳು, ದಂಡನೆಗೆ ಗುರಿಯಾದವರು ಅಥವಾ ಕಪ್ಪು ಪಟ್ಟಿಯಲ್ಲಿ ಸೇರಿದವರು ಅಥವಾ ದಿವಾಳಿಕಾರರು ಅಥವಾ ಸರ್ಕಾರಕ್ಕೆ ಕೊಡಬೇಕಾದ ಬಾಕಿಯನ್ನು ಕೊಡಲು, ತಪ್ಪಿದವರು ಅಥವಾ ಅಪ್ರಾಪ್ತ ವಯಸ್ಸಿನವರು ಕೊಟ್ಟ ಟೆಂಡರುಗಳನ್ನು ಮಾನ್ಯ ಮಾಡಲಾಗುವುದಿಲ್ಲ. ಅಂಥ ವ್ಯಕ್ತಿಗಳು ಟೆಂಡರು ಕೊಟ್ಟಲ್ಲಿ ಅಂಥ ಟೆಂಡರುಗಳ ಜೊತೆಯಲ್ಲಿ ಇಟ್ಟ ಭದ್ರತಾ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

6. ಟೆಂಡರುಗಳನ್ನು ಸೀಲ್ ಮಾಡಿದ ಲಕೋಟೆಯಲ್ಲಿ ಕೆಳಗೆ ಸಹಿ ಮಾಡಿದವರ ಕಾರ್ಯಾಲಯಕ್ಕೆ ಟೆಂಡರಿನ ದಿವಸ ಮದ್ಯಾಹ್ನ 3.00 ಘಂಟೆಯವರೆಗೆ ಖುದ್ದಾಗಿ ಹಾಕಲಿಕ್ಕೆ ಈ ಕಾರ್ಯಾಲಯದಲ್ಲಿ ಟೆಂಡರ್ ಪೆಟ್ಟಿಗೆ ಇಡಲಾಗುವುದು. ಮೇಲೆ ಹೇಳಿದ ವೇಳೆ 3.00 ಘಂಟೆ ಇದ್ದು ಈ ಕಾರ್ಯಾಲಯದ ಗಡಿಯಾರದ ವೇಳೆಯಂತೆ ಇರುತ್ತದೆ. ಷರತ್ತಿಗೊಳಿಸಲ್ಪಟ್ಟ ಅಥವಾ ತಂತಿ ಸಂದೇಶ ಮುಖಾಂತರ ಬಂದ ಟೆಂಡರುಗಳನ್ನು ಮಾನ್ಯ ಮಾಡಲಾಗುವುದಿಲ್ಲ.

7. ಟೆಂಡರುದಾರರು ತಮ್ಮ ಪೂರ್ಣ ಹೆಸರು, ವಯಸ್ಸು ಮತ್ತು ಸರಿಯಾದ ಅಂಚೆಯ ವಿಳಾಸ ಮುಂತಾದ ಎಲ್ಲಾ ಮಾಹಿತಿಯನ್ನು ಟೆಂಡರು ಪಾರಂನಲ್ಲಿ ತುಂಬಿ ನಿರ್ದಿಷ್ಟ ಸ್ಥಳದಲ್ಲಿ ತಮ್ಮ ಪೂರ್ಣ ಸಹಿ ಮಾಡತಕ್ಕದ್ದು. ಟೆಂಡರ್ ಫಾರಂನಲ್ಲಿ ಯಾವುದಾದರೂ ತಪ್ಪು ತಡೆಗಳಿದ್ದಲ್ಲಿ ಅಂತವುಗಳನ್ನು ಹೊಡೆದು ಹಾಕಿ ಟೆಂಡರುದಾರರು ತಮ್ಮ ಚಿಕ್ಕ ರುಜು ಹಾಕತಕ್ಕದ್ದು ಹೀಗೆ ಮಾಡಲು ತಪ್ಪಿದ್ದಲ್ಲಿ ಅಥವಾ ಅಪೂರ್ಣ ಮಾಹಿತಿ ಪೂರೈಯಿಸಿದಲ್ಲಿ ಅಂತಹ ಟೆಂಡರುಗಳನ್ನು ಕೆಳಗೆ ಸಹಿ ಮಾಡಿದವರು ಅನರ್ಹಗೊಳಿಸಬಹುದು.

8. ಟೆಂಡರನ್ನು ಕಂಪನಿಯ ವತಿಯಿಂದ ಕೊಡುವ ಪಕ್ಷದಲ್ಲಿ: 1. ಷರತ್ತು ಸಂಖ್ಯೆ: 64(1) ರಲ್ಲಿ ಹೇಳಿದಂತೆ ಕಂಪನಿಯ ಪ್ರತಿಯೊಬ್ಬ ಪಾಲುದಾರನ ಬಗ್ಗೆ ಮಾಹಿತಿಯನ್ನು ಟೆಂಡರ ಫಾರ್ಮಿನಲ್ಲಿ ಪೂರೈಸತಕ್ಕದ್ದು ಮತ್ತು ಟೆಂಡರ ಪಾರ್ಮನ್ನು ಅಂಥ ಕಂಪನಿಯ ಪ್ರತಿಯೊಬ್ಬ ಪಾಲುದಾರನು ಸಹಿ ಮಾಡತಕ್ಕದ್ದು. 2. ಕಂಪನಿಯ ನಿಯಮಿತ ಅಥವಾ ನೋಂದಾಯಿಸಿದ ಕಂಪನಿ ಆಗಿರಬೇಕು. 3. ಕಂಪನಿಯ ಎಲ್ಲಾ ಪಾಲುದಾರರಿಗೆ ಟೆಂಡರನ್ನು ಸಹಿ ಮಾಡಲು ಸಾಧ್ಯವಾಗದಿದ್ದ ಪಕ್ಷದಲ್ಲಿ ಟೆಂಡರನ್ನು ಸಹಿ ಮಾಡುವ ವ್ಯಕ್ತಿಯ ಕಂಪನಿಯ ಎಲ್ಲಾ ಪಾಲುದಾರರಿಂದ ಹೀಗೆ ಮಾಡಲು ಅಧಿಕಾರ ಪತ್ರ (ಪವರ್ ಆಫ್ ಆಟರ್ನಿ) ಪಡೆದು ಕೊಂಡವನಾಗಿರಬೇಕು ಮತ್ತು ಇಂಥ ಅಧಿಕಾರ ಪತ್ರದ ಒಂದು ಪ್ರತಿಯನ್ನು ಟೆಂಡರಿಗೆ ಲಗತ್ತಿಸಬೇಕು. 4. ನ್ಯಾಯಾಧೀಶರಿಂದ ಅಥವಾ ಕರ್ನಾಟಕ ರಾಜ್ಯದ ಯಾವುದೇ ಗೆಜೆಟೆಡ್ ಅಧಿಕಾರಿಯ ದೃಢೀಕರಿಸಿದ ಪಾಲುದಾರಿಕೆಯ ಪ್ರಮಾಣ ಪತ್ರದ ಒಂದು ಪ್ರತಿಯನ್ನು ಕೂಡ ಟೆಂಡರಿನ ಜೊತೆ ಲಗತ್ತಿಸತಕ್ಕದ್ದು.

9. ಟೆಂಡರುದಾರರು ತರಬೇತಿಗಳ ವಿವರ ಅಂದಾಜು ಪತ್ರಿಕೆಯಲ್ಲಿ ಕಾಣಿಸಿದ ಐಟಂಗಳನ್ನು ಸರಿಯಾಗಿ ಪರಿಶೀಲಿಸಿ ಓದಿ ಅರಿತು, ಸರಿ ಇದ್ದ ಬಗ್ಗೆ ಮನಗೊಂಡ ಇವುಗಳಿಗೆ ಸಂಬಂಧಿಸಿದಂತೆ ಒಟ್ಟಾರೆ ಕೆಲಸಕ್ಕೆ ತಮ್ಮ ಅತೀ ಕಡಿಮೆ ಅಥವಾ ಹೆಚ್ಚು ಶೇಕಡಾವಾರು ದರಗಳನ್ನು ಕೊಡಬೇಕು. ಐಟಂವಾರು ಪ್ರತ್ಯೇಕ ದರಗಳನ್ನು ಕಾಣಿಸಬಾರದು. ಟೆಂಡರು ಫಾರ್ಮಿನಲ್ಲಿ ದರಗಳನ್ನು ಅಂಕಿ ಮತ್ತು ಅಕ್ಷರ ಎರಡರಲ್ಲಿಯೂ ಬರೆಯತಕ್ಕದ್ದು.

10. ಅ. ಟೆಂಡರು ಫಾರಂಗಳಿಗೆ ಅಂದಾಜು ವೆಚ್ಚದ ಶೇ. 2.5% ಇ. ಎಂ. ಡಿ. ಯನ್ನು ಸ್ಥಾನಿಕ ರಾಷ್ಟ್ರೀಕೃತ ಮನ್ನಣೆ ಪಡೆದ ಬ್ಯಾಂಕಿನ ಮೇಲೆ ನೀಡಲಾದ ಡಿಮಾಂಡ್ ಡ್ರಾಫ್ಟ್ ಅಥವಾ ಠೇವಣಿ ಪಾವತಿ, ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್ ಅಥವಾ ರಾಷ್ಟ್ರೀಕೃತ ಯೋಜನಾ ಉಳಿತಾಯ ಸರ್ಟಿಫೀಕೇಟ್ ಇವುಗಳಲ್ಲಿ ಯಾವುದಾದರೂ ಒಂದು ವಿಧಾನದಲ್ಲಿ ಈ ಕೆಳಗೆ ಸಹಿ ಮಾಡಿದವರ ಹೆಸರಿನಲ್ಲಿ ವರ್ಗಾಯಿಸಿ ಟೆಂಡರ್ ಫಾರ್ಮಿಗೆ ಲಗತ್ತಿಸಬೇಕು.

ಬ). ಅರಣ್ಯ ಕೂಲಿಕಾರರ ಸಹಕಾರಿ ಸಂಘಗಳು ಈ ಕೆಲಸಗಳಿಗೆ ಟೆಂಡರು ಕೊಡಲು ಇಚ್ಚಿಸಿದಲ್ಲಿ ಕ್ರಮ ಸಂಖ್ಯೆ: 10(ಅ) ದಲ್ಲಿ ಹೇಳಿದಂತೆ ಭದ್ರತಾ ಠೇವಣಿ (ಈ. ಎಂ. ಡಿ) ಯನ್ನು ಇಡಬೇಕಾಗುವುದು.

11. ದಿನಾಂಕ: 14/12/07 ರಂದು ಮದ್ಯಾಹ್ನ 3.00 ಗಂಟೆ ವೇಳೆಯವರೆಗೆ ಟೆಂಡರನ್ನು ಈ ಕಛೇರಿಯಲ್ಲಿ ಅದಕ್ಕೆಂದೆ ಇಟ್ಟಿರುವ ಟೆಂಡರ್ ಪೆಟ್ಟಿಗೆಯಲ್ಲಿ ಹಾಕಬೇಕು.

12. ದಿನಾಂಕ: 14/12/07 ರಂದು ಮದ್ಯಾಹ್ನ 4.00 ಗಂಟೆಗೆ ಹಾಜರಿರುವ ಟೆಂಡರುದಾರರ ಸಮ್ಮುಖದಲ್ಲಿ ಟೆಂಡರ್‌ಗಳನ್ನು ತೆರೆಯಲಾಗುವುದು.

13. ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರುಗಳನ್ನು ಯಾವುದೇ ಕಾರಣ ಕೊಡದೇ ಮಂಜೂರು ಮಾಡುವ ಅಥವಾ ನಿರಾಕರಿಸುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ತಾಂತ್ರಿಕ ಮತ್ತು ಆಡಳಿತ ತರಬೇತಿ ಸಂಸ್ಥೆ, ವೈಟ್ ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು ಇವರು ಕಾಯ್ದಿರಿಸಿರುತ್ತಾರೆ. ತಿರಸ್ಕೃತ ಟೆಂಡರ್‌ಗಳಿಗೆ ಕಾರಣ ನೀಡಲಾಗುವುದಿಲ್ಲ.

14. ಯಶಸ್ವಿ ಟೆಂಡರ್‌ದಾರರಿಗೆ ಕೆಲಸದ ಆದೇಶ ನೀಡಿದ 3 ದಿನಗಳೊಳಗೆ ಈ ಕಛೇರಿಯಲ್ಲಿ ರೂ. 100.00 ಚಾಪಾ ಕಾಗದದ ಮೇಲೆ ಕರಾರು ಮಾಡಿಕೊಂಡು ಕೆಲಸದ ಆದೇಶ ಪಡೆಯುವುದು.

15. ಗುತ್ತಿಗೆದಾರರು ಮಾಡಬಹುದಾದ ಯಾವ ಷರತ್ತುಗಳನ್ನು ಅಂಗೀಕರಿಸುವುದಿಲ್ಲ.

16. ಯಶಸ್ವಿ ಟೆಂಡರುದಾರರಿಂದ ಈ. ಎಂ. ಡಿ ಜೊತೆಯಲ್ಲಿ ಒಟ್ಟು ಬಿಲ್ಲಿನ ಶೇಕಡಾ 5 ರಷ್ಟು ಮೊತ್ತವನ್ನು ಅವರ ಬಿಲ್ಲುಗಳಲ್ಲಿ ಭದ್ರತಾ ಠೇವಣಿಯಾಗಿ (Security Deposit) ಹಿಡಿಯಲಾಗುವುದು. ಈ ಹಣವನ್ನು ಅವರಿಗೆ ಒಪ್ಪಿಸಿದ ಕೆಲಸವನ್ನು ತೃಪ್ತಿಕವಾಗಿ ಪೂರೈಸಿದ ನಂತರ ಟೆಂಡರ್ ಅವಧಿ ಮುಗಿದ ಮೇಲೆ ಹಿಂತಿರುಗಿಸಲಾಗುವುದು.

17. ಪ್ರತಿ ಬಿಲ್ಲಿನಲ್ಲಿ ಪ್ರಚಲಿತ ಆದೇಶದ ಪ್ರಕಾರ ಚಾಲ್ತಿಯಲ್ಲಿರುವ ಕರಗಳನ್ನು ಅಂದರೆ ಆದಾಯ ತೆರಿಗೆ ಮತ್ತು ವಾಣಿಜ್ಯ ತೆರಿಗೆ ವ್ಯಾಟ್ ಮುಂತಾದುಗಳನ್ನು ಕಟಾವು ಮಾಡಲಾಗುವುದು.

18. ಈ ಗುತ್ತಿಗೆಗೆ ಸಂಬಂಧಿಸಿದಂತೆ ಯಾವುದಾದರೂ ತಂಟೆ ತಕರಾರು ಬಂದರೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ತರಬೇತಿ, ಧಾರವಾಡ ಇವರ ನಿರ್ದಾರವೇ ಅಂತಿಮ ನಿರ್ಧಾರವಾಗಿರುತ್ತದೆ.

19. ಟೆಂಡರುದಾರರ ವತಿಯಿಂದ ನೇಮಿಸತಕ್ಕ ಕೆಲಸಗಾರರ ವಿವರಗಳನ್ನು ಈ ಕಛೇರಿಗೆ ನೀಡತಕ್ಕದ್ದು ಮತ್ತು ಕೆಲಸದ ಅವಧಿಯಲ್ಲಿ ಟೆಂಡರುದಾರರು ನೇಮಿಸಿದ ಕೆಲಸಗಾರರಲ್ಲಿ ಯಾವುದೇ ವಿಧವಾದ ಜೀವ ಮತ್ತು ಆಸ್ತಿ ನಷ್ಟ ಸಂಭವಿಸಿದ್ದಲ್ಲಿ ಅದಕ್ಕೆ ಸ್ವತ: ಟೆಂಡರುದಾರರು/ಗುತ್ತಿಗೆದಾರರೇ ಹೊಣೆಗಾರರಾಗಿರುತ್ತಾರೆ.

20. ಕೆಲಸಗಳನ್ನು ತೃಪ್ತಿಕರವಾಗಿ ಮಾಡಲಾಗಿದೆ/ ಪೂರೈಸಲಾಗಿದೆ ಎಂಬುದರ ಬಗ್ಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ/ ವಲಯ ಅರಣ್ಯಾಧಿಕಾರಿಗಳು ಪರಿಶೀಲಿಸಿ ಪ್ರಮಾಣಿಕರಿಸಿದ ನಂತರ ಬಿಲ್ಲು ಪಾವತಿಸಲಾಗುವುದು.

21. ಟೆಂಡರುದಾರರು ಅಪ್ರಾಪ್ತ ವಯಸ್ಸಿನ ಬಾಲ ಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸಬಾರದು.

22. ಉಪ ಅರಣ್ಯ ಸಂರಕ್ಷಣಾಧಿಕಾರಿ ಅಥವಾ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿ ಅಥವಾ ಪ್ರತಿನಿಧಿ ಸದರಿ ಕೆಲಸವನ್ನು ನೋಡಬಯಸಿದ್ದಲ್ಲಿ ಅದಕ್ಕೆ ಅನುವು ಮಾಡಿಕೊಡಬೇಕು.

23. ಟೆಂಡರುದಾರರು ನಿರ್ವಹಿಸಿದ ಕೆಲಸಗಳ ಪೈಕಿ ಯಾವುದೇ ಕೆಲಸ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ತೃಪ್ತಿಕರವಾಗದೇ ಇದ್ದಲ್ಲಿ ಆ ಕೆಲಸಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ತೀರ್ಮಾನದಂತೆ ಹಣ ಪಾವತಿ ಮಾಡಲಾಗುವುದು. ಊಟ ಮತ್ತು ಉಪಹಾರದ ಪ್ರಮಾಣ (ಶಿಬಿರಾರ್ಥಿಗಳು ಸೇವಿಸಿದಂತೆ) ಮತ್ತು ಗುಣಮಟ್ಟ ಸರಿ ಇಲ್ಲದೇ ಇದ್ದಲ್ಲಿ ಯಾವುದೇ ಕಾರಣವನ್ನು ನೀಡದೇ ಟೆಂಡರನ್ನು ರದ್ದು ಪಡಿಸಲಾಗುವುದು.

24. ಈ ಕೆಲಸವನ್ನು ಕೈಗೊಳ್ಳುವಾಗ ಟೆಂಡರುದಾರರಿಂದ ಇಲಾಖೆಗೆ ಸಂಬಂಧಿಸಿದ ಯಾವುದೇ ಆಸ್ತಿ ಪಾಸ್ತಿಗಳಿಗೆ ನಷ್ಟ ಒದಗಿದಲ್ಲಿ ಪರಿಹಾರವಾಗಿ ಅದನ್ನು ಅವರ ಹೆಸರಿನಲ್ಲಿರುವ ಭದ್ರತಾ ಠೇವಣಿಯಲ್ಲಿ ಮುರಿದುಕೊಳ್ಳಲಾಗುವುದು.

25. ಟೆಂಡರುದಾರರು ನಿಗದಿತ ಅವಧಿಯಲ್ಲಿ ಕಾಮಗಾರಿಯನ್ನು ಪೂರೈಸದೇ ಅಪೂರ್ಣ ಸ್ಥಿತಿಯಲ್ಲೇ ಬಿಟ್ಟು ಹೋದ ಪಕ್ಷದಲ್ಲಿ ಸದರಿ ಕೆಲಸವನ್ನು ಟೆಂಡರುದಾರರ ಖರ್ಚು ಹಾಗೂ ಜವಾಬ್ದಾರಿ ಮೇಲೆ ಇಲಾಖಾ ವತಿಯಿಂದ ಹಾಗೂ ಅವರಿಟ್ಟ ಭದ್ರತಾ ಠೇವಣಿಯಲ್ಲಿ ಈ ಕೆಲಸ ಕೈಗೊಳ್ಳಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸಂಪೂರ್ಣ ಹಕ್ಕಿರುತ್ತದೆ.

26. ಬಿಲ್ಲುಗಳನ್ನು ಪಾವತಿಗೆ ಸಲ್ಲಿಸುವಾಗ ನಿಗದಿತ ನಮೂನೆಯಲ್ಲಿ ಸಂಬಂದಿಸಿದ ಅಧಿಕಾರಿಗಳ ಮುಖಾಂತರ ಸಲ್ಲಿಸತಕ್ಕದ್ದು.

27. ಟೆಂಡರುದಾರರಿಗೆ ನೀಡಲಾದ ಮಾದರಿ ಮತ್ತು ವಿವರಣೆಯಲ್ಲಿ ಬದಲಾವಣೆಗಳನ್ನು ಮಾಡಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮಾತ್ರ ಅಧಿಕಾರವಿರುತ್ತದೆ. ಈ ಬದಲಾವಣೆಗಳಿಂದ ಕರಾರು ಒಪ್ಪಂದ ಅನುಚಿತಗೊಳ್ಳುವುದಿಲ್ಲ.

28. ಕೆಲಸದಲ್ಲಿ ಏನಾದರೂ ಬದಲಾವಣೆ ಮಿತಿಗೊಳಿಸಿದಲ್ಲಿ ಟೆಂಡರುದಾರರು ಕ್ಲೈಂ ಮಾಡಬಹುದಾದ ಯಾವುದೇ ರೀತಿಯ ಪರಿಹಾರಗಳನ್ನು ನೀಡಲು ಇಲಾಖೆ ಬದ್ದವಾಗಿರುವುದಿಲ್ಲ.

29. ಟೆಂಡರುದಾರರು ನಿರ್ವಹಿಸಿದ ಕೆಲಸದ ಗುಣಮಟ್ಟ ಕಳಪೆಯಾಗಿದ್ದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ನಿಗದಿ ಪಡಿಸಿದ ದಂಡವನ್ನು ಕಟ್ಟಬೇಕು ಹಾಗೂ ಸದರಿ ಕೆಲಸವನ್ನು ಟೆಂಡರುದಾರರ ವೆಚ್ಚದಲ್ಲಿ ಸರಿಪಡಿಸಬೇಕು.

30. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಪೂರ್ವಾನುಮತಿ ಇಲ್ಲದೇ ಬೇರೆಯವರಿಗೆ ಕಾಮಗಾರಿಯನ್ನು ವಹಿಸಿಕೊಟ್ಟಲ್ಲಿ ಕೆಲಸದ ಆದೇಶವನ್ನು ರದ್ದು ಪಡಿಸಲಾಗುವುದಲ್ಲದೇ E.M.D. ಮತ್ತು S.D. ಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

31. ಕೆಲಸದ ಅವದಿಯಲ್ಲಿ ಗುತ್ತಿಗೆದಾರರು ನೇಮಿಸಿಕೊಂಡ ಸೌಕರರಿಗೆ ಏನಾದರೂ ಪೆಟ್ಟು ಬಿದ್ದಲ್ಲಿ ಅಥವಾ ಏನಾದರೂ ಆಕಸ್ಮಿಕ ಘಟನೆ ಸಂಭವಿಸಿದಲ್ಲಿ ಅವರ ಚಿಕಿತ್ಸಾ ವೆಚ್ಚವನ್ನು ಟೆಂಡರುದಾರರೇ ಭರಿಸಬೇಕು.

32. ಗುತ್ತಿಗೆದಾರರು ಈ ಕೆಲಸಕ್ಕೆ ನೇಮಿಸಿದ ಕೂಲಿ ಜನರಿಗೆ ಸರ್ಕಾರ ನಿಗದಿಪಡಿಸಿರುವ ಕನಿಷ್ಟ ವೇತನವನ್ನು ತಪ್ಪದೆ ನೀಡುವುದು. ತಪ್ಪಿದ್ದಲ್ಲಿ ಅದಕ್ಕೆ ಇಲಾಖೆ ಜವಾಬ್ದಾರಿಯಲ್ಲ.

33. ಕೆಲಸದ ಪ್ರದೇಶದಲ್ಲಿ ಕೆಲಸ ನಿರ್ವಹಿಸುವ ಕೆಲಸಗಾರರ ಆರೋಗ್ಯದ ಬಗ್ಗೆ ಹಾಗೂ ಯೋಗಕ್ಷೇಮಕ್ಕೆ ಸಂಬಂದಿಸಿದ ಎಲ್ಲಾ ಸುರಕ್ಷತೆ ಕ್ರಮಗಳನ್ನು ಟೆಂಡರುದಾರರು ತೆಗೆದುಕೊಳ್ಳುವುದು.

34. ಕೆಲಸದ ಪ್ರಾರಂಭಿಸುವಲ್ಲಿ ಇಲಾಖಾ ವತಿಯಿಂದ ಯಾವುದೇ ವಿಳಂಬವಾದಲ್ಲಿ ಟೆಂಡರುದಾರರಿಗೆ ಈ ಸಂಬಂಧ ಯಾವುದೇ ಪರಿಹಾರ ನೀಡಲಾಗುವುದಿಲ್ಲ.

35. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಅನುಮತಿ ಇಲ್ಲದೇ ಯಾವುದೇ ಕೆಲಸವನ್ನು ಟೆಂಡರುದಾರರು ಪ್ರಾರಂಭಿಸಬಾರದು.

36. ಬಿಲ್ಲಿನ ಹಣವನ್ನು ಯಶಸ್ವಿ ಟೆಂಡರುದಾರರಿಗೆ ಪೂರ್ಣಗೊಂಡ ಕೆಲಸಕ್ಕೆ ಕ್ರಾಸ್ ಚೆಕ್ ಮೂಲಕವೇ ನೀಡಲಾಗುವುದು.

37. ಟೆಂಡರುದಾರರು ಟೆಂಡರಿನಲ್ಲಿ ನಮೂದಿಸಿದ ದರವು ನಿಯಮಾವಳಿಗಳ ಪ್ರಕಾರ ಮಾರಾಟ ತೆರಿಗೆ ಮತ್ತು ಇತರೆ ಯಾವುದೇ ತೆರಿಗೆ ದರವನ್ನು ಒಳಗೊಂಡಿರಬೇಕು. ಈ ಬಗ್ಗೆ ಗುತ್ತಿಗೆದಾರರಿಗೆ ಪ್ರತ್ಯೇಕವಾಗಿ ಯಾವುದೇ ಹೆಚ್ಚುವರಿ ಹಣ ನೀಡಲಾಗುವುದಿಲ್ಲ.

38. ಯಶಸ್ವಿ ಟೆಂಡರುದಾರರು ಟೆಂಡರ್‌ನಲ್ಲಿ ಒಮ್ಮೆ ಕಾಣಿಸಿದ ದರಗಳು ಗುತ್ತಿಗೆ ಅವಧಿ ಪೂರ್ಣಗೊಳ್ಳುವರೆಗೆ (31/03/08 ರವರೆಗೆ) ಯಾವುದೇ ಕಾರಣದಿಂದ ಬದಲಾವಣೆ ಮಾಡಲಾಗುವುದಿಲ್ಲ.

39. ಕಾರಣಾಂತರಗಳಿಂದ ಯಾವುದೇ ಕೆಲಸವನ್ನು ಪೂರ್ಣವಾಗಿ ನಿಲ್ಲಿಸಬೇಕಾಗಿದ್ದಲ್ಲಿ ಅಂತಹ ಗುತ್ತಿಗೆದಾರರಿಗೆ ಈ.ಎಂ.ಡಿ. ಹಣವನ್ನು ಗುತ್ತಿಗೆ ಅವಧಿ ಮುಗಿದ ಹಿಂದಿರುಗಿಸಲಾಗುತ್ತದೆ ಮತ್ತು ಈ ಬಗ್ಗೆ ಯಾವುದೇ ರೀತಿ ಪರಿಹಾರ ನೀಡಲಾಗುವುದಿಲ್ಲ.

40. ಊಟೋಪಚಾರಕ್ಕೆ ಉಪಯೋಗಿಸುವ ಅಡುಗೆ ಮನೆ, ಊಟದ ಮನೆ, ಊಟದ ಸ್ಥಳ, ಊಟದ ತಟ್ಟೆಗಳು, ಗ್ಲಾಸ್, ವಗೈರೆಗಳನ್ನು ಸ್ವಚ್ಛಮಾಡುವ ಹಾಗೂ ಅಚ್ಚುಕಟ್ಟಾಗಿಡುವ ಜವಾಬ್ದಾರಿ ಗುತ್ತಿಗೆದಾರರದೇ ಆಗಿರುತ್ತದೆ.

41. ಉತ್ತಮ ಗುಣಮಟ್ಟದ ಆಹಾರ ಧಾನ್ಯ ಹಾಗೂ ಸಾಮಗ್ರಿಗಳನ್ನು ಮಾತ್ರ ಉಪಯೋಗಿಸಬೇಕು.

42. ನಮೂದಿಸಿದ ದರಗಳಲ್ಲಿ ಸಾಮಗ್ರಿಗಳ ಬೆಲೆ ಮತ್ತು ಸಾಗಾಣಿಕೆ ವೆಚ್ಚ ಸೇರಿರುತ್ತದೆ ಎಂದು ತಿಳಿಯುವುದು ಸಾಗಾಣಿಕೆ ವೆಚ್ಚವನ್ನು ಪ್ರತ್ಯೇಕವಾಗಿ ನೀಡಲಾಗುವುದಿಲ್ಲ.

43. ತರಬೇತಿಗೆ ಹಾಜರಾಗುವ ಶಿಬಿರಾರ್ಥಿಗಳ ಅವರ ದಿನಪ್ರತಿ ಹಾಜರಾತಿಗೆ ತಕ್ಕಂತೆ ಊಟೋಪಚಾರದ ಹಣ ಪಾವತಿಸಲಾಗುವುದು.

44. ಕೆಲಸದ ಸ್ಥಳದಿಂದ ನಿರುಪಯುಕ್ತ ವಸ್ತುಗಳನ್ನು ಗುತ್ತಿದಾರರು ತೆಗೆಯದಿದ್ದಲ್ಲಿ, ಸ್ವಚ್ಛಗೊಳಿಸದಿದ್ದಲ್ಲಿ ಅಂದಾಜು ವೆಚ್ಚದ ಮೇಲೆ ಶೇ. 2% ನ್ನು ಬಿಲ್ಲುಗಳಲ್ಲಿ ಕಡಿತಗೊಳಿಸಲಾಗುವುದು.

45. ಟೆಂಡರ್ ಫಾರಂ ನೀಡುವ ದಿನಗಳಲ್ಲಿ ಗುತ್ತಿಗೆದಾರರ ನೋಂದಣಿಯನ್ನು ಮಾಡಲಾಗುವುದಿಲ್ಲ.

46. ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸುವ ಗುತ್ತಿಗೆದಾರರು ನೋಂದಣಿ ಪತ್ರದ ಪ್ರತಿ, ಅನುಭವದ ಪ್ರಮಾಣ ಪತ್ರದ ಪ್ರತಿ ಹಾಗೂ ಕಾಮಗಾರಿಗಳಿಗೆ ಸಂಬಂಧಿಸಿದ ಅರ್ಹತೆಯ ದಾಖಲಾತಿಗಳನ್ನು ಅರ್ಜಿ ಸಲ್ಲಿಸುವ ಸಮಯದಲ್ಲಿ ದಾಸ್ತಾವೇಜುಗಳ ಶುಲ್ಕದೊಂದಿಗೆ ಸಲ್ಲಿಸುವುದು.

47. ಅಡಿಗೆ ಮಾಡಲು ಸಂಸ್ಥೆಯಲ್ಲಿ ಉಚಿತವಾಗಿ ಸ್ಥಳ ಹಾಗೂ ಅಡುಗೆ ಪಾತ್ರೆ, ಗ್ಯಾಸ್ ಸ್ಟೌವ್ (ಗ್ಯಾಸ್ ಹೊರತು ಪಡಿಸಿ), ಡೈನಿಂಗ್ ಟೇಬಲ್ ಮತ್ತು ಕುರ್ಚಿಗಳನ್ನು ಇಲಾಖೆಯಿಂದ ಒದಗಿಸಲಾಗುವುದು. ಇವುಗಳಿಗೆ ಹಾನಿ ಸಂಭವಿಸಿದಲ್ಲಿ ಅಥವಾ ಕಳೆದುಹೋದಲ್ಲಿ ಗುತ್ತಿಗೆದಾರರಿಗೆ ಪಾವತಿಸುವ ಮೊತ್ತದಲ್ಲಿ ವಸ್ತುವಿನ ಮೂಲ ಬೆಲೆಯನ್ನು ಮುರಿದುಕೊಳ್ಳಲಾಗುವುದು.

48. ಶಿಬಿರಾರ್ಥಿಗಳಿಗೆ ಉತ್ತಮ ಗುಣಮಟ್ಟದ ಆರೋಗ್ಯಕರ ಪದಾರ್ಥಗಳನ್ನು (ಸಮತೋಲನದ ಪೌಷ್ಟಿಕ ಆಹಾರ) ಪೂರೈಸತಕ್ಕದ್ದು

49. ಗುತ್ತಿಗೆ ಅವಧಿಯಲ್ಲಿ ಗುತ್ತಿಗೆದಾರರು ಉಪಯೋಗಿಸುವ ಕಟ್ಟಡದ ವಿದ್ಯುತ್ ಬಿಲ್ಲು ಗುತ್ತಿಗೆದಾರರೇ ಭರಿಸತಕ್ಕದ್ದು.

50. ಅಡಿಗೆ ಮಾಡಲು ಬೇಕಾಗುವ ನೀರು, ಅಡಿಗೆ ಅನಿಲ (ಗ್ಯಾಸ್) ಅಥವಾ ಇನ್ನಾವುದೇ ರೀತಿಯ ಹೊಗೆರಹಿತ ಇಂಧನವನ್ನು ಗುತ್ತಿಗೆದಾರರೇ ವ್ಯವಸ್ಥೆ ಮಾಡಿಕೊಳ್ಳಬೇಕು.

51. ಟೆಂಡರುದಾರರು ಪ್ರಕಟಣೆಯೊಂದಿಗೆ ಗೊತ್ತುಪಡಿಸಿದ ಅನುಭವ ಶೆಡ್ಯೂಲ್ ಆಧಾರಿತ ಯಾವ ರೀತಿಯ ಊಟ ತಿಂಡಿ((Tiffin) ಸರಬರಾಜು ಮಾಡುತ್ತಿರಿ (Combination) ಎಂಬ ಪಟ್ಟಿಯನ್ನು ಟೆಂಡರ್ ಜೊತೆ ಲಗತ್ತಿಸಬೇಕು.

52. ತರಬೇತಾರ್ಥಿಗಳಿಗೆ ಊಟೋಪಚಾರವನ್ನು ಶೆಡ್ಯೂಲ್‌ನಲ್ಲಿ ಗೊತ್ತುಪಡಿಸಿದ ಸಮಯಕ್ಕೆ ಸರಿಯಾಗಿ ನೀಡಬೇಕು ಮತ್ತು ತರಬೇತಾರ್ಥಿಗಳಿಂದ ಯಾವುದೇ ತಕರಾರು ಬರದಂತೆ ನಿಗಾ ವಹಿಸುವುದು.

53. ಶಿಬಿರಾರ್ಥಿಗಳ ಜೊತೆಗೆ ಬರುವ ಅತಿಥಿ ಉಪನ್ಯಾಸಕರಿಗೂ ಸಹ ಶಿಬಿರಾರ್ಥಿಗಳಿಗೆ ನೀಡುವಂತೆ ಊಟೋಪಚಾರವನ್ನು ನೀಡಬೇಕು.

54. ಊಟ ಉಪಹಾರದಲ್ಲಿ ಆಹಾರ ನಂಜು ((Food Poison) ಆಗದಂತೆ ಎಚ್ಚರ ವಹಿಸಬೇಕು. ಒಂದು ವೇಳೆ ಈ ರೀತಿ ಆದಲ್ಲಿ ಹಾಗೂ ಅದರಿಂದಾಗುವ ಹಾನಿಗೆ ಸರ್ಕಾರಿ ಕಾನೂನು ಪ್ರಕಾರ ಯಶಸ್ವಿ ಟೆಂಡರುದಾರರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.

55. ಊಟ ಮತ್ತು ಉಪಹಾರದಲ್ಲಿ ಯಾವುದಾದರೂ ಲೋಪದೋಷಗಳು ಉಂಟಾದಲ್ಲಿ ಆರೋಗ್ಯಾಧಿಕಾರಿಗಳ ತಪಾಸಣೆ ಹಾಗೂ ತೀರ್ಮಾನದಂತೆ ಕ್ರಮ ತೆಗೆದುಕೊಳ್ಳಲಾಗುವುದು.

56. ಗ್ಯಾಸ್ ಸಿಲೆಂಡರ್ ಕುರಿತು ಸಂಪೂರ್ಣ ಸುರಕ್ಷತಾ ಸಾಮಗ್ರಿಗಳನ್ನು ಅಳವಡಿಸಿಕೊಳ್ಳಬೇಕು. ಸ್ಫೋಟ ಅಥವಾ ಅಪಘಾತಗಳು ಸಂಭವಿಸಿದಲ್ಲಿ ಅವುಗಳಿಗೆ ಸಂಪೂರ್ಣವಾಗಿ ಗುತ್ತಿಗೆದಾರರೇ ಜವಾಬ್ದಾರರು.

57. ತರಬೇತಿ ಅವಧಿಯಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಾಗ ಸೂಕ್ತ ಪರ್ಯಾಯ ವ್ಯವಸ್ಥೆಯನ್ನು ಸ್ವಂತ ಖರ್ಚಿನಲ್ಲಿ ಗುತ್ತಿಗೆದಾರರೇ ಮಾಡಿಕೊಳ್ಳಬೇಕು.

58. ಕಾಲ ಕಾಲಕ್ಕೆ ಸರ್ಕಾರದಿಂದ ಅನುಧಾನ ಬಿಡುಗಡೆಯಾದ ನಂತರವೇ ಹಣ ಪಾವತಿಸಲಾಗುವುದು. ಹಣ ಪಾವತಿಸಲು ತಡವಾದಲ್ಲಿ ಗುತ್ತಿಗೆದಾರರು ಯಾವುದೇ ತರಹದ ಬಡ್ಡಿ ಸ್ವೀಕರಣೆಗೆ ಅರ್ಹರಿರುವುದಿಲ್ಲ.

59. ತರಬೇತಿ ಸಂಖ್ಯೆಗಳಲ್ಲಿ ಹೆಚ್ಚು ಕಡಿಮೆಯಾಗುವ ಸಂಭವಿರುತ್ತದೆ. ಕನಿಷ್ಟ ಪಕ್ಷ 15 ತರಬೇತಾರ್ಥಿಗಳು ಹಾಜರಿದ್ದಲ್ಲಿ ಮಾತ್ರ ತರಬೇತಿಯನ್ನು ಜರುಗಿಸಲಾಗುವುದು ಮತ್ತು ಊಟ ಉಪಚಾರವನ್ನು ನೀಡುವುದು.

60. ಈ ತರಬೇತಿಗಳು ವಿವಿಧ ಯೋಜನೆ ಹಾಗೂ ವಿವಿಧ ಘಟಕಗಳಾಧಾರಿತವಾಗಿದ್ದರಿಂದ ಹಂತ ಹಂತವಾಗಿ ಹಾಗೂ ಕೆಲವು ತರಬೇತಿಗಳು ಸತತವಾಗಿ ಜರುಗುವ ಸಾಧ್ಯತೆಗಳಿರುತ್ತವೆ. ತರಬೇತಿ ಅವಧಿಯಲ್ಲಿ ತರಬೇತಿಗಳ ಹಾಜರಾತಿ ಕನಿಷ್ಟ 15, ಗರಿಷ್ಟ 100 ರವರೆಗೆ ಆಗಬಹುದು.

61. ಸದರಿ ತರಬೇತಿಗಳಿಗೆ ಸಂಬಂಧಪಟ್ಟ ಯಾವುದೇ ವಿವರಗಳನ್ನು ಟೆಂಡರುದಾರರು ಎಲ್ಲಾ ಕೆಲಸದ ದಿವಸ, ಕಛೇರಿ ವೇಳೆಯಲ್ಲಿ ಪಡೆಯಬಹುದು.

62. ಟೆಂಡರುಗಳನ್ನು ಮಂಜೂರು ಮಾಡಲು ಅಧಿಕಾರವುಳ್ಳ ಅಧಿಕಾರಿಯವರಿಗೆ ಕಳುಹಿಸಲಾಗುವುದು. ಟೆಂಡರುಗಳನ್ನು ಅದಷ್ಟು ಬೇಗನೆ ಪ್ರಕಟಿಸಲಾಗುವುದು. ಈ ಅವಧಿಯಲ್ಲಿ ಯಾರಾದರೂ ಟೆಂಡರುದಾರನು ತನ್ನ ಟೆಂಡರನ್ನು ಹಿಂತೆಗೆದುಕೊಂಡಲ್ಲಿ ಅಂಥ ಟೆಂಡರುದಾರರ ಟೆಂಡರ್ ಜೊತೆಯಲ್ಲಿ ಇಟ್ಟ ಭದ್ರತಾ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಮತ್ತು ಇಂಥ ಟೆಂಡರ ಕಡಿಮೆ ಇದ್ದು ಸಾಮಾನ್ಯವಾಗಿ ಒಪ್ಪಿಕೊಳ್ಳುವಂತಹದಾಗಿದ್ದರ/ ಮಂಜೂರು ಮಾಡುವದಿದ್ದ ಪಕ್ಷದಲ್ಲಿ ಅಂಥವರು ತಮ್ಮ ಟೆಂಡರನ್ನು ಹಿಂತೆಗೆದುಕೊಂಡ ಕಾರಣಕ್ಕಾಗಿ ಮರು ಟೆಂಡರಿನಲ್ಲಿ ಸರ್ಕಾರಕ್ಕೆ ಆಗುವ ಹಾನಿಯ ಮೊತ್ತವನ್ನು ಕರ್ನಾಟಕ ಅರಣ್ಯ ಇಲಾಖೆ ಕಾಯ್ದಿ ಕಾಲಂ 109 ಹಾಗೂ 112 ರಂತೆ ಜಮೀನು ಮಹಸೂಲ ಬಾಕಿ ಎಂದು ವಸೂಲು ಮಾಡಲಾಗುವುದು. :–ಟೆಂಡರ ಫಲಿತಾಂಶವನ್ನು ದಾಖಲು ಅಂಚೆಯ ಮೂಲಕ ಹಾಗೂ ಈ ಕಾರ್ಯಾಲಯದ ನೋಟಿಸು ಬೋರ್ಡಿಗೆ ಹಚ್ಚಿ ಪ್ರಕಟಿಸಲಾಗುವುದು. ಅದನ್ನು ಇಂಥ ಟೆಂಡರುದಾರರು ಒಪ್ಪಿರುವುದಾಗಿಯೂ ತಿಳಿಯಲಾಗುವುದು.

63. ಟೆಂಡರುಗಳ ಫಲಿತಾಂಶವನ್ನು ಪ್ರಕಟಿಸಿದ 15 ದಿನಗಳ ಒಳಗೆ ಯಶಸ್ವಿ ಟೆಂಡರುದಾರನು ನಿರ್ಧಿಷ್ಟ ಫಾರಂನಲ್ಲಿ ರೂ. 100/–ಗಳ ಸ್ಟಾಂಪು ಪೇಪರ್ ಮೇಲೆ ಅವಶ್ಯಕ ಕರಾರು ನಾಮೆಗೆ ಸಹಿ ಮಾಡತಕ್ಕದ್ದು. ಇಂಥ ಕರಾರು ನಾಮೆಯ ಪ್ರತಿಗಳು ಇಚ್ಚಿತ ಟೆಂಡರುದಾರರ ಪರಿಶೀಲನೆಗಾಗಿ ಈ ಕಾರ್ಯಾಲಯದಲ್ಲಿ ಲಭ್ಯವಿರುತ್ತದೆ. ಯಶಸ್ವಿ ಟೆಂಡರುದಾರರು ಕರಾರು ನಾಮೆ ಸಹಿ ಮಾಡಿದ ನಂತರ ಗುತ್ತಿಗೆ ಕೆಲಸವನ್ನು ಪ್ರಾರಂಬಿಸತಕ್ಕದ್ದು. ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಫಲಿತಾಂಶವನ್ನು ತಿಳಿಸಿದ 15 ದಿನದ ಒಳಗೆ ಕರಾರು ನಾಮೆಯನ್ನು ಸಹಿ ಮಾಡಲು ಸಾಧ್ಯವಾಗದಿದ್ದ ಪಕ್ಷದಲ್ಲಿ ಅಂಥ ಟೆಂಡರುದಾರರಿಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ತರಬೇತಿ, ಧಾರವಾಡ ಇವರು ದಂಡ ಸಹಿತ ಕರಾರು ನಾಮೆಗೆ ಸಹಿ ಮಾಡುವ ಅವಧಿಯನ್ನು ವಿಸ್ತರಿಸಬಹುದು.

64. ಮೇಲೆ ವಿವರಿಸಿದ ಯಾವುದಾದರೂ ಷರತ್ತನ್ನು ಪಾಲಿಸಲು ತಪ್ಪಿದ್ದಲ್ಲಿ ಷರತ್ತು ಸಂಖ್ಯೆ 9(ಅ) ರಂತೆ ಇಟ್ಟ ಭದ್ರತಾ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕುವುದಲ್ಲದೇ ಗುತ್ತಿಗೆಯ ಕೆಲಸವನ್ನು ಮೂಲ ಗುತ್ತಿಗೆದಾರರ ಖರ್ಚು ಮತ್ತು ಜವಾಬ್ದಾರಿಯ ಮೇಲೆ ಮರು ಟೆಂಡರು ಮಾಡಲಾಗುವುದು. ಇಂಥ ಮರು ಟೆಂಡರಿನಲ್ಲಿ ಸರ್ಕಾರಕ್ಕೆ ಹಾನಿಯಾದ ಪಕ್ಷದಲ್ಲಿ ಅಂಥ ಹಾನಿಯ ಮೊತ್ತವನ್ನು ಕರ್ನಾಟಕ ಅರಣ್ಯ ಸಂಹಿತೆ 1963 ರ ಕಲಂ 109 ಮತ್ತು119 ರಂತೆ ಭೂಕಂದಾಯ ಬಾಕಿಯಂತೆ ಪರಿಗಣಿಸಿ ವಸೂಲು ಮಾಡಲಾಗುವುದು.

65. ಈ ಕೆಳಗಿನ ಷರತ್ತುಗಳಿಗೆ ವಿಶೇಷ ಗಮನವನ್ನು ನೀಡತಕ್ಕದ್ದು.

a. ಗುತ್ತಿಗೆಯ ಕೆಲಸಗಳಿಗೆ ಯಾವುದೇ ತರಹದ ಮುಂಗಡವನ್ನು ಕೊಡಲಾಗುವುದಿಲ್ಲ.

b. ಅಂದಾಜು ಪತ್ರಿಕೆಯಲ್ಲಿ ವಿವರಿಸಿದಂತೆ ಕೆಲಸಗಳನ್ನು ಸಂಬಂಧಿಸಿದ ವಲಯ ಅರಣ್ಯ ಅಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಅಥವಾ ಉಪ ಅರಣ್ಯ ಸಂರಕ್ಷಣಾಧಿಕಾರಿ ಇವರು ಕಾಲ ಕಾಲಕ್ಕೆ ಲಿಖಿತ ಅಥವಾ ಮೌಖಿಕವಾಗಿ ನೀಡುವ ಆದೇಶದಂತೆ ಮಾಡತಕ್ಕದ್ದು.

c. ಕೆಲಸದ ಅವಧಿಯಲ್ಲಿ ಕೆಲಸ ನಡೆದ ಸ್ಥಳಗಳಲ್ಲಿ ಗುತ್ತಿಗೆದಾರರಾಗಲಿ ಅಥವಾ ಅವರಿಂದ ಅಧಿಕಾರ ಪಡೆದ ಏಜೆಂಟನಾಗಲಿ ಹಾಜರಿರುವುದು ಕಡ್ಡಾಯ.

d. ಗುತ್ತಿಗೆಯ ಅವಧಿಯಲ್ಲಿ ಅಂದಾಜು ಪತ್ರಿಕೆಯಲ್ಲಿ ಕಾಣಿಸಿದ ಕೆಲಸಗಳಲ್ಲಿ ಏನಾದರೂ ಪರಿವರ್ತನೆ ಅಥವಾ ಮಾರ್ಪಾಡು ಮಾಡುವುದು ಅವಶ್ಯವೆಂದು ಕೆಳಗೆ ಸಹಿ ಮಾಡಿದ ಅಧಿಕಾರಿಗಾಗಲಿ ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿಗಳಾಗಲೀ ಕಂಡು ಬಂದಲ್ಲಿ ಅಥವಾ ಪರಿವರ್ತನೆ ಅಥವಾ ಮಾರ್ಪಾಡುಗಳನ್ನು ಅವರಿಂದ ಗುತ್ತಿಗೆಗಾಗಿ ಮಂಜೂರಾದ ದರಗಳಲ್ಲಿಯೇ ಮಾಡಿ ಮುಗಿಸಲು ಗುತ್ತಿಗೆದಾರನು ಬದ್ದನಿರುತ್ತಾನೆ.

ಇಲ್ಲಿ ಏನಾದರೂ ತೊಂದರೆ ಉದ್ಭವಿಸದಲ್ಲಿ ಈ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಹಕ್ಕು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿದ್ದಾರೆ.

ವಿ. ದೊರೈಸ್ವಾಮಿ

ಉಪ ಅರಣ್ಯ ಸಂರಕ್ಷಣಾಧಿಕಾರಿ,

ಅರಣ್ಯ ತಾಂತ್ರಿಕ ಮತ್ತು ಆಡಳಿತ ತರಬೇತಿ ಸಂಸ್ಥೆ, ಬೆಂಗಳೂರು.

Ù¤ö¦Ñý

ಅರಣ್ಯ ತಾಂತ್ರಿಕ ಮತ್ತು ಆಡಳಿತ ತರಬೇತಿ ಸಂಸ್ಥೆ, ವೈಟ್ ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು–048

P¦ àN.	PÐà¹ ÕÔÊ F v, ®N¥ Ô¦Ôà	¬YÐôÔ Ôg	wN¤Êý ÔöÃÐYô	C.HN.¥. Ôö¬	ÝÊñ
1	**KN¹ô º¼P¦ ÔôóÐv¦ Ôà® ¬ÊÄó®Y** ಅ. ಬೆಡ್ ಕಾಫಿ : ಟೀ ಬೆಳಗಿನ ತಿಂಡಿ ***B.*** ಇಡ್ಲಿ, ವಡೆ, ಚಟ್ನಿ, ಸಾಂಬಾರು/ ದೋಸೆ, ಪಲ್ಯ ಚಟ್ನಿ/ ಪುಳಿಯೊಗ್ಗರೆ/ ಚೌಚೌ ಬಾತ್/ ಪಲಾವ್/ ಚಪಾತಿ/ ಬಿಸಿಬೇಳೆ ಬಾತ್, ಚಿತ್ರಾನ್ನ/ ಇತರೆ ಮತ್ತು ಕಾಫಿ / ಟೀ 11.30 am ಕಾಫಿ / ಟೀ ಬಿಸ್ಕತ್-2 ವಿಧ **C. Ôô¹ñ¦ä¦ Ôô¬ô Êñ®¦ F v** ಚಪಾತಿ, ಚಟ್ನಿ/ ಪೂರಿ, ಕುರುಮಾ/ ಮುದ್ದೆ, ಅನ್ನ, ಸಾಂಬಾರು, ಪಲ್ಯ ಎರಡು ವಿಧ, ತಿಳಿಸಾರು, ಮೊಸರು, ಮಜ್ಜಿಗೆ, ಹಪ್ಪಳ, ಉಪ್ಪಿನ ಕಾಯಿ/ಮಾಂಸಾಹಾರಿ 1 ಸ್ವೀಟ್ = ಜಾಮೂನು/ ಶಾವಿಗೆ ಕೀರು/ ಹೆಸರು ಬೇಳೆ ಕೀರು/ ಹಲ್ವ ಇತರೆ (ಹಣ್ಣು/Fruit salad/Ice cream) **D. Ôô¹ñ¦ä¦ 0 Êñ®¦** ಕಾಫಿ / ಟೀ ಬಿಸ್ಕತ್-2 ವಿದ **KN¹ô º¼¹ Ôà® Êå¬ ¬ÊÄó®Y** **E. Ôô¹ñ¦ä¦ F v** 11.30 am ಕಾಫಿ / ಟೀ ಬಿಸ್ಕತ್-2 ವಿಧ ಚಪಾತಿ / ಪೂರಿ / ಮುದ್ದೆ, ಅನ್ನ, ಸಾಂಬಾರು, ಪಲ್ಯ ಎರಡು ವಿಧ, ತಿಳಿಸಾರು, ಮೊಸರು, ಮಜ್ಜಿಗೆ, ಹಪ್ಪಳ, ಉಪ್ಪಿನ ಕಾಯಿ ಮತ್ತು 1 ಸ್ವೀಟ್ (ಹಣ್ಣು/Fruit salad/Ice cream) 4.00 pm ಕಾಫಿ / ಟೀ ಬಿಸ್ಕತ್-2 ವಿಧ	ತರಬೇತಿಯಲ್ಲಿ ಭಾಗವಹಿಸುವ ಪ್ರತಿ ಶಿಬಿರಾರ್ಥಿಗೆ ದಿನಕ್ಕೆ 159.95/- ರೂ. ತರಬೇತಿಯಲ್ಲಿ ಭಾಗವಹಿಸುವ ಪ್ರತಿ ಶಿಬಿರಾರ್ಥಿಗೆ ದಿನಕ್ಕೆ 79/- ರೂ.	5.00 ಲಕ್ಷ	0.125 ಲಕ್ಷ	ಮೂರು ದಿನಗಳಿಗೊಮ್ಮೆ ಕಡ್ಡಾಯವಾಗಿ ಮಾಂಸಾಹಾರಿ ಊಟವನ್ನು ನೀಡಬೇಕು. ಹಾಗೂ ಮಾಂಸಾಹಾರಿ ಊಟ ನೀಡಿದಾಗ ಸಸ್ಯಹಾರಿಗಳಿಗೆ ಹೆಚ್ಚಿನ ಹಣ್ಣು ಹಂಪಲನ್ನು ನೀಡಬೇಕು

ಉಪ ಅರಣ್ಯ ಸಂರಕ್ಷಣಾಧಿಕಾರಿ,

ಪಿ.ಆರ್. 699 ಅರಣ್ಯ ತಾಂತ್ರಿಕ ಮತ್ತು ಆಡಳಿತ ತರಬೇತಿ ಸಂಸ್ಥೆ, ಬೆಂಗಳೂರು.

WATER RESOURCES DEPARTMENT

(Minor Irrigation)

ಸಂಖ್ಯೆ:ಸನೀಇ 04 ಮಸಾವಿ 2007, ದಿನಾಂಕ: 6ನೇ ನವೆಂಬರ್ 2007

STATE TENDER BULLETIN

The details of the notices inviting the tender in respect of the Procurement requirements of different procurement entities to be published as a part of the State - Tender Bulletin for the 2nd week of Nov 2007. The details of the published Tender Notification may be obtained from the concerned Executive Engineers who has invited the Tender.

V. GOVINDARAJ

State Tender Bulletin Officer and Deputy Secretary to Government

Water Resources Department (M.I.)

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ವಿಭಾಗ, ಶಿವಮೊಗ್ಗ

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ)

ಟೆಂಡರ್ ಪ್ರಕಟಣೆ ಸಂಖ್ಯೆ:10/2007-08, ದಿನಾಂಕ: 25ನೇ ಸೆಪ್ಟೆಂಬರ್ 2007

ಸಂ: ಕಾಪಾಇಂ:ಸನೀವಿ:ಶಿ:ಸ್ಇಂ-1:4702-ಟೆಂಡರ್:ಏತ ನೀರಾವರಿ:2007-08: ದಿನಾಂಕ: 29ನೇ ಅಕ್ಟೋಬರ್ 2007

ಟೆಂಡರ್ ಪ್ರಕಟಣೆ ಸಂಖ್ಯೆ: 16/2007-08 ದಿನಾಂಕ: 29ನೇ ಅಕ್ಟೋಬರ್ 2007

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಐಟಂವಾರು ಟೆಂಡರ್ ಅನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ, ದ್ವಿ ಪ್ರತಿಗಳಲ್ಲಿ ಮೊಹರು ಮಾಡಲಾದ ಹಾಗೂ ಕಾಮಗಾರಿಯ ಹೆಸರನ್ನು ಸ್ಪಷ್ಟವಾಗಿ ಮೇಲೆ ನಮೂದಿಸಲಾದ ಲಕೋಟೆಯಲ್ಲಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ-1999, 2000 ಮತ್ತು ಆ್ಯಕ್ಟ್-2000ರ ಪ್ರಕಾರ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ, ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳಿಂದ ಆಹ್ವಾನಿಸಲಾಗಿದೆ.

1. ಗುತ್ತಿಗೆದಾರರು ತಾಂತ್ರಿಕ ಬಿಡ್‌ಅನ್ನು ದ್ವಿಪ್ರತಿಗಳಲ್ಲಿ ನಿಗದಿತ ರೀತಿಯಲ್ಲಿ ಭರ್ತಿಮಾಡಿ ಅವಶ್ಯಕ ದೃಢೀಕೃತ ದಾಖಲಾತಿಗಳನ್ನು ಲಗತ್ತಿಸಿ, ಲಕೋಟೆಯಲ್ಲಿ ಮೊಹರು ಮಾಡಿ, ಲಕೋಟೆ ಮೇಲೆ ತಾಂತ್ರಿಕ ಬಿಡ್ ಎಂದು ನಮೂದಿಸಿ, ಕಾಮಗಾರಿಯ ಹೆಸರು ಮತ್ತು ಗುತ್ತಿಗೆದಾರರ ಪೂರ್ಣ ವಿಳಾಸವನ್ನು ನಮೂದಿಸತಕ್ಕದ್ದು.
2. ಗುತ್ತಿಗೆದಾರರು ಆರ್ಥಿಕ ಬಿಡ್‌ಅನ್ನು ದ್ವಿಪ್ರತಿಗಳಲ್ಲಿ ನಿಗದಿತ ರೀತಿಯಲ್ಲಿ ಭರ್ತಿಮಾಡಿ ಅವಶ್ಯಕ ದೃಢೀಕೃತ ದಾಖಲಾತಿಗಳನ್ನು ಲಗತ್ತಿಸಿ, ಲಕೋಟೆಯಲ್ಲಿ ಮೊಹರು ಮಾಡಿ, ಲಕೋಟೆ ಮೇಲೆ ಆರ್ಥಿಕ ಬಿಡ್ ಎಂದು ನಮೂದಿಸಿ, ಕಾಮಗಾರಿಯ ಹೆಸರು ಮತ್ತು ಗುತ್ತಿಗೆದಾರರ ಪೂರ್ಣ ವಿಳಾಸವನ್ನು ನಮೂದಿಸತಕ್ಕದ್ದು.

ಮೇಲ್ಕಂಡ ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ಲಕೋಟೆ ಎರಡನ್ನೂ ಇನ್ನೊಂದು ಲಕೋಟೆಯಲ್ಲಿ ಹಾಕಿ ಕಾಮಗಾರಿ ಹೆಸರು ಹಾಗೂ ಗುತ್ತಿಗೆದಾರರ ಪೂರ್ಣ ವಿಳಾಸ ನಮೂದಿಸಿ, ಮೊಹರು ಮಾಡಿರುವ ಟೆಂಡರ್‌ಗಳನ್ನು ಈ ಕೆಳಗೆ ಸಹಿ ಮಾಡಿದ ಕಾರ್ಯಾಲಯದಲ್ಲಿ ಈ ಕೆಳಗೆ ಸೂಚಿಸಿದ ದಿನಾಂಕದಂದು ಸಂಜೆ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರ್ ಈ ಕೆಳಗೆ ಸಹಿ ಮಾಡಿದವರಿಂದ ನಮೂದಿಸಿರುವ ದಿನಾಂಕದಂದು ಅಥವಾ ಇತರೆ ಅನುಕೂಲಕರವಾದ ದಿನಾಂಕದಂದು ಟೆಂಡರ್‌ದಾರರ ಅಥವಾ ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು. ಈ ಕೆಳಗೆ ನಮೂದಿಸಿರುವ ದಿನಾಂಕಗಳು ಸಾರ್ವಜನಿಕ ದಿನಾಂಕವಾದರೆ ಮಾರನೆಯ ಕೆಲಸದ ದಿನವೇ ಅನ್ವಯಿಸುತ್ತದೆ ಎಂದೂ ಅರ್ಥೈಸಿಕೊಳ್ಳತಕ್ಕದ್ದು.

ತಾಂತ್ರಿಕ ಬಿಡ್‌ಅನ್ನು ಮೊದಲು (ಸಾಧ್ಯವಾದರೆ ಟೆಂಡರ್ ಸ್ವೀಕರಿಸುವ ದಿನಾಂಕದಂದೇ) ತೆರೆಯಲಾಗುವುದು. ಗುತ್ತಿಗೆದಾರರು ಇದರಲ್ಲಿ ಒದಗಿಸಲಾದ ವಿವರಗಳನ್ನು ಪರಿಶೀಲಿಸಲಾಗುವುದು. ತೃಪ್ತಿಕರವಾದ ವಿವರಗಳನ್ನು ಸಲ್ಲಿಸಿದ ಗುತ್ತಿಗೆದಾರರ ತಾಂತ್ರಿಕ ಬಿಡ್‌ಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾದ ನಂತರ ಅರ್ಹರಾದ ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ಮಾತ್ರ ತೆರೆಯಲಾಗುವುದು. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ಅರ್ಹ ಗುತ್ತಿಗೆದಾರರಿಗೆ ಲಿಖಿತವಾಗಿ ತಿಳಿಸಲಾಗುವುದು. ತಾಂತ್ರಿಕ ಬಿಡ್‌ನಲ್ಲಿ ಅನರ್ಹವಾದ ಗುತ್ತಿಗೆದಾರರ ಆರ್ಥಿಕ ಬಿಡ್ ತೆರೆಯಲಾಗುವುದಿಲ್ಲ, ಈ ವಿಷಯದಲ್ಲಿ ಸಕ್ಷಮ ಅಧಿಕಾರಿಗಳ ನಿರ್ಧಾರವು ಅಂತಿಮವಾಗಿರುತ್ತದೆ.

1.	ಖಾಲಿ ಟೆಂಡರ್ ಫಾರಂಗಳನ್ನು ಕೊಡುವ ಕೊನೆಯ ದಿನಾಂಕ:	22.11.2007ರ ಸಂಜೆ 5.00 ಗಂಟೆಯವರೆಗೆ ಕೊಡಲಾಗುವುದು
2.	ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: (ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್‌ಗಳನ್ನು ಒಳಗೊಂಡಂತೆ)	10.12.2007ರ ಸಂಜೆ 4.00 ಗಂಟೆ ಒಳಗೆ ಸಲ್ಲಿಸುವುದು.
3.	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	10.12.2007 ರ ಸಂಜೆ 5.00 ಗಂಟೆ

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ (ರೂ. ಗಳಲ್ಲಿ)	ಈ.ಎಂ.ಡಿ. ಮೊತ್ತ (ರೂ. ಗಳಲ್ಲಿ)	ಖಾಲಿ ಟೆಂಡರ್ ಫಾರಂ ಬೆಲೆ (ಹಿಂದಿರುಗಿಸಲಾರ ದಂಥದ್ದು) ತೆರಿಗೆ ಸೇರಿ (ರೂ. ಗಳಲ್ಲಿ)	ಗುತ್ತಿಗೆದಾರರ ದರ್ಜೆ	ಕಾಲಮಿತಿ ಮಳೆಗಾಲ ಸೇರಿ
1.	ಶಿವಮೊಗ್ಗ ಜಿಲ್ಲೆ, ಭದ್ರಾವತಿ ತಾ॥ ತಡಸ ಗ್ರಾಮದ ಹತ್ತಿರ ಭದ್ರಾನದಿಯಿಂದ ತಡಸ ದೊಡ್ಡ ಕೆರೆಗೆ ನೀರೊದಗಿಸುವ ಏತ ನೀರಾವರಿ ಯೋಜನೆ.	1,50,00,000/-	1,50,000/	15,000/	1ನೇ ದರ್ಜೆ	13 ತಿಂಗಳು

ಅರ್ಜಿ ಸಲ್ಲಿಸುವ ವಿಧಾನ:

ಗುತ್ತಿಗೆದಾರರು ಖಾಲಿ ಟೆಂಡರ್ ಫಾರಂಗಳ ಸಲುವಾಗಿ ಅರ್ಜಿ ಸಲ್ಲಿಸುವಾಗ ಈ ಕೆಳಗೆ ತೋರಿಸಿದ ಮೂಲ ಪ್ರಮಾಣ ಪತ್ರಗಳನ್ನು ತೋರಿಸಿ ಪರಿಶೀಲನೆಗೊಳಪಡಿಸಿ, ಅರ್ಜಿಯೊಂದಿಗೆ ನಕಲು ಪ್ರತಿಗಳನ್ನು ಲಗತ್ತಿಸುವುದು.

1. ಕೆ.ಪಿ.ಡಬ್ಲ್ಯೂ.ಡಿ. ಕರ್ನಾಟಕ ರಾಜ್ಯದ ಗುತ್ತಿಗೆದಾರರ ನೊಂದಣಿ ಪ್ರಮಾಣ ಪತ್ರ.
2. ಇತ್ತೀಚಿನ ವರಮಾನ ತೆರಿಗೆಯ ಕ್ಲಿಯರೆನ್ಸ್ ಪ್ರಮಾಣ ಪತ್ರ.

3. ಇತ್ತೀಚಿನ ಕರ್ನಾಟಕ ರಾಜ್ಯ ಮಾರಾಟ ತೆರಿಗೆಯ ಕ್ಲಿಯರೆನ್ಸ ಪ್ರಮಾಣ ಪತ್ರ.
4. ಅರ್ಹತಾ ಷರತ್ತಿನ ಸಂಖ್ಯೆ 2 ಮತ್ತು 3ರಲ್ಲಿ ತಿಳಿಸಿರುವಂತೆ ಟೆಂಡರ್ ಪಡೆಯಲು ಅರ್ಹತೆಗಳನ್ನು ಹೊಂದಿರಬೇಕು.
5. ಅಂಚೆ ಮೂಲಕ ಟೆಂಡರ್ ಪಡೆಯಬೇಕಾದಲ್ಲಿ ಟೆಂಡರ್ ಫಾರಂ ಬೆಲೆಗೆ ರೂ. 200.00 ಹೆಚ್ಚುವರಿಯಾಗಿ ಸೇರಿಸತಕ್ಕದ್ದು. ಅಂಚೆ ವಿಳಂಬ ಅಥವಾ ಖಾಲಿ ಟೆಂಡರ್ ಅರ್ಜಿದಾರರನ್ನು ಅಂಚೆ ಮೂಲಕ ತಲುಪುವ ಖಾತರಿಯನ್ನು ಈ ಇಲಾಖೆ ನೀಡುವುದಿಲ್ಲ.

ಖಾಲಿ ಟೆಂಡರ್ ಫಾರಂಗಳಿಗೆ ಹಣ ಸಂದಾಯ ಮಾಡುವ ವಿಧಾನ:-

ಡಿ.ಡಿ. ಅಥವಾ ಬ್ಯಾಂಕ್‌ನ ಚೆಕ್‌ನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಶಿವಮೊಗ್ಗ ಇವರ ಹೆಸರಿಗೆ ಪಡೆದು ಅರ್ಜಿಯೊಂದಿಗೆ ಲಗತ್ತಿಸಬೇಕು.

ಇ.ಎಂ.ಡಿ. ಸಲ್ಲಿಸುವ ವಿಧಾನ:-

ನಿಗದಿತ ಇ.ಎಂ.ಡಿ. ಯನ್ನು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕಿನ ಡಿ.ಡಿ/ಪೇ ಆರ್ಡರ್/ಎಫ್.ಡಿ.ಆರ್ ಅಥವಾ ರಾಷ್ಟ್ರೀಯ ಉಳಿತಾಯ ಪತ್ರಗಳ ರೂಪದಲ್ಲಿ ಸಲ್ಲಿಸಬಹುದು. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಸಲ್ಲಿಸಿದ್ದೇ ಆದಲ್ಲಿ ಗುತ್ತಿಗೆದಾರರು ಅವುಗಳನ್ನು ಕಾರ್ಯಪಾಲಕ ಇಂಜಿನಿಯರ್‌ರವರ ಹೆಸರಿನಲ್ಲಿ ಒತ್ತೆ ಇಟ್ಟಿರಬೇಕು. ಇ.ಎಂ.ಡಿ ಯನ್ನು ರಾಷ್ಟ್ರೀಕೃತ ಬ್ಯಾಂಕಿನ ಡಿ.ಡಿ/ಪೇ ಆರ್ಡರ್/ ಎಫ್.ಡಿ.ಆರ್ ರೂಪದಲ್ಲಿ ಸಲ್ಲಿಸಿದರೆ, ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಶಿವಮೊಗ್ಗ ಇವರ ಹೆಸರಿನಲ್ಲಿರಬೇಕು. ಇ.ಎಂ.ಡಿ ಯನ್ನು ಟೆಕ್ನಿಕಲ್ ಬಿಡ್‌ನ ಲಕೋಟೆಯಲ್ಲಿ ಲಗತ್ತಿಸಿರಬೇಕು. ಯಾವುದೇ ಕಾರಣಕ್ಕೂ ಬ್ಯಾಂಕ್ ಗ್ಯಾರಂಟಿ ಪರಿಗಣಿಸುವುದಿಲ್ಲ. ಇ.ಎಂ.ಡಿ ಮಾನ್ಯತೆ, ಟೆಂಡರ್ ಸ್ವೀಕರಿಸಿದ ದಿನಾಂಕದಿಂದ 180 ದಿನಗಳ ಅವಧಿಗೆ ಹೊಂದಿರಬೇಕು.

ತಾಂತ್ರಿಕ (ಟೆಕ್ನಿಕಲ್) ಬಿಡ್ ಲಕೋಟೆಯಲ್ಲಿ ಒದಗಿಸಬೇಕಾದ ವಿವರಗಳು:-

1. ಇ.ಎಂ.ಡಿ.
2. ಅರ್ಹತಾ ಷರತ್ತಿನ ಸಂಖ್ಯೆ 2 ಮತ್ತು 3 ರಲ್ಲಿ ತಿಳಿಸಿರುವಂತೆ ಟೆಂಡರ್ ಪಡೆಯಲು ಅರ್ಹತೆಗಳ ವಿವರಗಳು.
3. ತಾಂತ್ರಿಕ ಬಿಡ್‌ನಲ್ಲಿರುವ ನಮೂನೆ (1) ರಿಂದ (8) ಗಳನ್ನು ಪೂರ್ಣ ರೀತಿಯಲ್ಲಿ ಭರ್ತಿ ಮಾಡಿ ದೃಢೀಕರಿಸಬೇಕು.

ಈ.ಎಂ.ಡಿ ರಹಿತ ಟೆಂಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ.

ಆರ್ಥಿಕ ಬಿಡ್ ಲಕೋಟೆಯಲ್ಲಿ ಒದಗಿಸಬೇಕಾದ ವಿವರಗಳು:-

1. ಶೆಡ್ಯೂಲ್-ಬಿ ಯನ್ನು ದ್ವಿ-ಪ್ರತಿಯಲ್ಲಿ ಅಂಕಿ ಮತ್ತು ಅಕ್ಷರಗಳಲ್ಲಿ ದರಗಳನ್ನು ಹಾಗೂ ಈ ದರಗಳನ್ನು ಟೆಂಡರ್ ಪರಿಮಾಣದೊಂದಿಗೆ ಗುಣಿಸಿದಲ್ಲಿ ಒದಗುವ ಮೊತ್ತವನ್ನು ನಮೂದಿಸಿದಂತೆ ಸಲ್ಲಿಸಬೇಕು. ಯಾವುದೇ ತಿದ್ದುಪಡಿ ಮಾಡಿರುವುದನ್ನು ಗುತ್ತಿಗೆದಾರರು ಸಹಿಯೊಂದಿಗೆ ದೃಢೀಕರಿಸಬೇಕು.
2. ಪಿ.ಡಬ್ಲ್ಯೂ.ಜಿ-65 ಮತ್ತು 66 ಇವುಗಳನ್ನು ಹಾಗೂ ಇದರ ಅಡಕಗಳನ್ನು ಯಾವುದೇ ವಿವರಗಳಿಗಾಗಿ ಪೂರ್ಣ ರೀತಿಯಲ್ಲಿ ಭರ್ತಿ ಮಾಡಿ ಎಲ್ಲಾ ಪುಟಗಳ ಮೇಲೂ ಸಹಿ ಮಾಡಿರಬೇಕು.

ಷರತ್ತುಗಳು:-

1. ಗುತ್ತಿಗೆದಾರರು ಅರ್ಜಿಯೊಂದಿಗೆ ಟೆಂಡರ್ ಫಾರಂ ಶುಲ್ಕವನ್ನು (ಹಿಂದಿರುಗಿಸಲಾರದಂಥದ್ದು) ಪಾವತಿಸತಕ್ಕದ್ದು ಮತ್ತು ಗುತ್ತಿಗೆದಾರರ ನೊಂದಣಿ ಪ್ರಮಾಣ ಪ್ರತಿ ಲಗತ್ತಿಸತಕ್ಕದ್ದು.
2. ಟೆಂಡರ್ ಪಡೆಯಲು ಅರ್ಹತೆಯಾಗಿ ಪ್ರತಿಯೊಬ್ಬ ಗುತ್ತಿಗೆದಾರರು ಕಳೆದ ಐದು ವರ್ಷಗಳಲ್ಲಿ.......
   ಅ. ಕನಿಷ್ಠ ಎರಡು ಆರ್ಥಿಕ ವರ್ಷಗಳಲ್ಲಿ ಟೆಂಡರ್‌ಗಿಡಲಾದ ಅಂದಾಜು ಮೊತ್ತದ ಶೇ. 200 ರಷ್ಟಕ್ಕೆ ಕಡಿಮೆ ಇಲ್ಲದಂತೆ (ಎಲ್ಲಾ ತರಹದ ಸಿವಿಲ್ ಕಾಮಗಾರಿಗಳ ನಿರ್ಮಾಣ) ವಾರ್ಷಿಕ ವಹಿವಾಟು ಮಾಡಿರಬೇಕು.
   ಆ. ಇದೇ ತರಹದ, ಟೆಂಡರ್‌ಗಿಡಲಾದ ಅಂದಾಜು ಮೌಲ್ಯಕ್ಕೆ ಶೇ. 50 ರಷ್ಟಕ್ಕೆ ಕಡಿಮೆ ಇಲ್ಲದಂತೆ ಕನಿಷ್ಠ ಒಂದು ಕಾಮಗಾರಿಯನ್ನು ತೃಪ್ತಿಕರವಾಗಿ ಮುಗಿಸಿರಬೇಕು.
   ಇ. ಯಾವುದೇ ಒಂದು ವರ್ಷದಲ್ಲಿ ಈ ಕೆಳಗೆ ಕಾಣಿಸಿದ ಕನಿಷ್ಠ ಪರಿಮಾಣದ ಕೆಲಸಗಳನ್ನು ಮಾಡಿರಬೇಕು.

ಕ್ರ. ಸಂ.	ಕೆಲಸದ ವಿವರ	ಕನಿಷ್ಠ ಪರಿಮಾಣಗಳು
1	ಅಗೆತದ ಕೆಲಸ (ಘ.ಮೀ)	7,500.00
2	ಮಣ್ಣಿನ ಒಡ್ಡು (ಘ.ಮೀ)	1,500.00
3	ಸರಳು ಸಹಿತ ಮತ್ತು ಸರಳು ರಹಿತ ಕಾಂಕ್ರಿಟ್ ಕೆಲಸ (ಘ.ಮೀ)	500.00
4	ರೈಸಿಂಗ್ ಮೈನ್ ಪ್ರಷರ್ / ಪಿ.ಎಸ್.ಸಿ. ಪೈಪ್ ಪೂರೈಕೆ ಹಾಗೂ ಅಳವಡಿಕೆ (ಮೀ)	1,000.00
5	ಪಂಪಿಂಗ್ ಮೆಷಿನರಿ ಪೂರೈಕೆ ಹಾಗೂ ಅಳವಡಿಕೆ (ಎಲ್ಲಾ ವಿದ್ಯುತ್ ಕಾಮಗಾರಿ ಒಳಗೊಂಡಂತೆ) (ಹೆಚ್.ಪಿ.)	60.00

3. ಅರ್ಜಿದಾರರು ಪ್ರದರ್ಶಿಸಬೇಕಾಗಿರುವುದು..
   ಅ) ಮುಖ್ಯವಾಗಿ ಹಾಗೂ ಮಹತ್ವವಾಗಿರುವ ಈ ಕೆಳಕಂಡ ಯಂತ್ರೋಪಕರಣಗಳನ್ನು ಹೊಂದಿರಬೇಕು (ಸ್ವಂತ ಅಥವಾ ಲೀಸ್ ಮೇಲೆ), ಲೀಸ್ ಆಗಿದ್ದಲ್ಲಿ ಜಿ.ಪಿ.ಎ ಹಾಗೂ ಮೂಲ ದಾಖಲಾತಿ ಒದಗಿಸಬೇಕು.

√ ಎಕ್ಸವೇಟರ್/ ಪೋಕ್ಲೇನ್ (0.90 ಘ.ಮೀ ಸಾಮರ್ಥ್ಯ) 1 ಸಂ.
√ ಲಾರಿಗಳು/ಟಿಪ್ಪರ್‌ಗಳು 3 ಸಂ.
√ ಕಾಂಕ್ರೀಟ್ ಮೆಷಿನ್ ಮಿಕ್ಸರ್ (10/7 ಘ.ಅ ಸಾಮರ್ಥ್ಯ) 4 ಸಂ.
√ ವೈಬ್ರೇಟರ್ 4 ಸಂ.
√ ಪಂಪ್ ಸೆಟ್ (5 ಹೆಚ್.ಪಿ) 2 ಸಂ.
√ ಪಂಪ್ ಸೆಟ್ (10 ಹೆಚ್.ಪಿ) 2 ಸಂ.
√ ಸೆಂಟ್ರಿಂಗ್ ಸಾಮಾಗ್ರಿಗಳು (ಕಾಂಕ್ರೀಟ್ ಕೆಲಸಕ್ಕೆ) 100 ಘ.ಮೀ ಪ್ರತಿ
√ ಟ್ರೈಪಾಡ್ ನೊಂದಿಗೆ ಇರುವ ಕ್ರೇನ್ 2 ಸಂ.

ಆ) ಇಂತಹದೇ ಯೋಜನೆ ನಿರ್ಮಾಣದ ಕನಿಷ್ಠ 5 ವರ್ಷ ಅನುಭವವುಳ್ಳ ಒಬ್ಬ ಸಿವಿಲ್ ಇಂಜಿನಿಯರಿಂಗ್ ಪದವಿ ಹೊಂದಿದ ಪ್ರಾಜೆಕ್ಟ್ ಮ್ಯಾನೇಜರ್ ಹಾಗೂ ಸಾಕಷ್ಟು ಅನುಭವವುಳ್ಳ ಈ ತರಹದ ಕೆಲಸ ಮಾಡಿರುವ ತಾಂತ್ರಿಕ ಪರಿಣಿತರನ್ನು ಹೊಂದಿರಬೇಕು. ಪಂಪಿಂಗ್ ಮೆಷಿನರಿ ಕೆಲಸವನ್ನು ಪರಿಣಿತರಿಂದ ಮಾಡಿಸಬೇಕು.

ಇ) ಈ ಯೋಜನೆಗೆ ಬೇಕಾದ ಸಂಪನ್ಮೂಲ ಚರಾಸ್ಥಿ ಮತ್ತು / ಅಥವಾ ಬ್ಯಾಂಕ್ ಕ್ರೆಡಿಟ್ ರೂಪದಲ್ಲಿ ಕನಿಷ್ಠ ರೂ. 130.00 ಲಕ್ಷಗಳ ಲಭ್ಯತೆ ಬಗ್ಗೆ ಪ್ರಮಾಣ ಪತ್ರ (ಕ್ರೆಡಿಟ್ ಲೈನ್ಸ್/ಅನುದಾನ ಪ್ರಮಾಣ ಪತ್ರ ಬ್ಯಾಂಕಿನಿಂದ ಪ್ರಮಾಣೀಕರಿಸಿದ್ದು).

4. ಕಾಮಗಾರಿಗೆ ಅವಶ್ಯವಿರುವ ಎಲ್ಲಾ ಸಾಮಾಗ್ರಿಗಳನ್ನು ಗುತ್ತಿಗೆದಾರರೇ ಒದಗಿಸತಕ್ಕದ್ದು ಮತ್ತು ಇಲಾಖಾ ವತಿಯಿಂದ ಯಾವುದೇ ಸಾಮಗ್ರಿಗಳನ್ನು ನೀಡಲಾಗುವುದಿಲ್ಲ. ಗುತ್ತಿಗೆದಾರರು ಭಾರತೀಯ ಮಾನಕ ಸಂಸ್ಥೆಯ ಗುಣಮಟ್ಟದ ಸಾಮಾಗ್ರಿಗಳನ್ನು ಉಪಯೋಗಿಸಬೇಕು. ಸಾಮಾಗ್ರಿಗಳ ಗುಣಮಟ್ಟವನ್ನು ಸಕ್ಷಮ ಗುಣನಿಯಂತ್ರಣ ಪ್ರಾಧಿಕಾರದವರಿಂದ ಪರೀಕ್ಷೆ ಮಾಡಿಸಿ ಗುಣಮಟ್ಟದ ಬಗ್ಗೆ ಪ್ರಮಾಣ ಪತ್ರ ಒದಗಿಸತಕ್ಕದ್ದು.

5. ಖಾಲಿ ಟೆಂಡರ್ ಫಾರಂ ವಿತರಿಸುವಾಗ ಗುತ್ತಿಗೆದಾರರ ನೋಂದಣಿ ಪುಸ್ತಕವನ್ನು ಕಡ್ಡಾಯವಾಗಿ ಹಾಜರುಪಡಿಸಿ ಅದರಲ್ಲಿ ಕಾಮಗಾರಿಗಳ ವಿವರಗಳನ್ನು ದಾಖಲಿಸತಕ್ಕದ್ದು.

6. ಸತತವಾಗಿ ಮೂರು ಬಾರಿ ಟೆಂಡರ್ ಫಾರಂ ಖರೀದಿಸಿ ಟೆಂಡರ್ ಹಾಕದೇ ಇರುವ ಗುತ್ತಿಗೆದಾರರು ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

7. ಕಾಮಗಾರಿಯನ್ನು ಉಪ-ಗುತ್ತಿಗೆ ನೀಡುವುದನ್ನು ನಿಷೇಧಿಸಲಾಗಿದೆ.

8. ಈ ವಿಭಾಗದಲ್ಲಿ ಹಿಂದೆ ನಿಗದಿತ ಸಮಯದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸದ ಗುತ್ತಿಗೆದಾರರಿಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

9. ಗುತ್ತಿಗೆದಾರರು ಮೇಲೆ ತಿಳಿಸಿರುವ ಎಲ್ಲಾ ದಾಖಲಾತಿಗಳನ್ನು ನೋಟರಿ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿದ ದಾಖಲಾತಿ ಪ್ರತಿಗಳನ್ನು ಟೆಂಡರ್‌ನೊಂದಿಗೆ ಲಗತ್ತಿಸತಕ್ಕದ್ದು. ಮೇಲೆ ತಿಳಿಸಿರುವ ಎಲ್ಲಾ ದಾಖಲಾತಿಗಳ ಮೂಲ ಪ್ರತಿಗಳನ್ನು ಗುತ್ತಿಗೆದಾರರು ಟೆಂಡರ್ ತೆರೆಯುವ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು. ಕೆಲಸ ನಿರ್ವಹಿಸಲಾದ ಕುರಿತಾದ ಪ್ರಮಾಣ ಪತ್ರವನ್ನು ಕಾರ್ಯಪಾಲಕ ಇಂಜಿನಿಯರ್ ದರ್ಜೆಗೆ ಕಡಿಮೆ ಇರದ ಅಧಿಕಾರಿಯವರಿಂದ ಪಡೆದಂತೆ ಲಗತ್ತಿಸತಕ್ಕದ್ದು.

10. ರಾಜ್ಯ ಮಾರಾಟ ತೆರಿಗೆಯಲ್ಲಿ ನೋಂದಣಿ ಸೂಚಿಸಿರುವ ಬಗ್ಗೆ ನೋಂದಣಿ ಪ್ರತಿ ಹಾಗೂ ಆದಾಯ ತೆರಿಗೆ ತೀರುವಳಿ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.

11. ಷರತ್ತುಗಳನ್ನೊಳಗೊಂಡ ಟೆಂಡರ್‌ನ್ನು ಪರಿಗಣಿಸುವುದಿಲ್ಲ.

12. ಟೆಂಡರ್ ಪ್ರಕಟಣೆಯಲ್ಲಿ ಏನಾದರೂ ತಿದ್ದುಪಡಿಗಳಿದ್ದರೆ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಶಿವಮೊಗ್ಗ ಇವರ ಕಛೇರಿಯ ನೋಟೀಸ್ ಫಲಕದಲ್ಲಿ ಪ್ರಕಟಿಸಲಾಗುವುದು/ತಿಳಿಸಲಾಗುವುದು.

13. ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಹಕ್ಕನ್ನು ಟೆಂಡರ್ ಒಪ್ಪಿಕೊಳ್ಳುವ ಸಕ್ಷಮ ಪ್ರಾಧಿಕಾರ ಕಾಯ್ದಿರಿಸಿಕೊಂಡಿರುತ್ತದೆ ಹಾಗೂ ಅತೀ ಕನಿಷ್ಠ ಟೆಂಡರನ್ನೇ ಒಪ್ಪಿಕೊಳ್ಳಬೇಕಾದ ಅನಿವಾರ್ಯತೆ ಇರುವುದಿಲ್ಲ.

14. ತಾಂತ್ರಿಕ ಬಿಡ್‌ನಲ್ಲಿ ವಿವರಗಳನ್ನು ನಮೂದಿಸಲು ಸ್ಥಳಾವಕಾಶ ಕಡಿಮೆಯಾದಲ್ಲಿ ಹೆಚ್ಚುವರಿ ಪುಟಗಳನ್ನು ಬಳಸಬಹುದಾಗಿದೆ.

15. ಅಂದಾಜು ದರಗಳ ಶೇ. 75 ಕ್ಕಿಂತ ಕಡಿಮೆ ದರವನ್ನು ಟೆಂಡರ್ ದರವಾಗಿ ನಮೂದಿಸಿದಲ್ಲಿ ಅಷ್ಟು ಮೊತ್ತಕ್ಕೆ "ಅಡಿಷನಲ್ ಪರ್‌ಫಾರ್ಮೆನ್ಸ್ ಸೆಕ್ಯೂರಿಟಿ" ಯನ್ನು ಯಶಸ್ವಿ ಗುತ್ತಿಗೆದಾರರು ಸಲ್ಲಿಸತಕ್ಕದ್ದು.

ಹೆಚ್ಚಿನ ವಿವರಗಳಿಗೆ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಶಿವಮೊಗ್ಗ ಇವರ ಕಛೇರಿಯನ್ನು, ಕಛೇರಿ ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಬಿ.ಹೆಚ್. ಯೋಗೇಶ್

ಪಿ.ಆರ್. 700

ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ವಿಭಾಗ, ಶಿವಮೊಗ್ಗ.

ಪಶುಪಾಲನಾ ಮತ್ತು ಪಶುವೈದ್ಯಸೇವಾ ಇಲಾಖೆ

ಉಪ ನಿರ್ದೇಶಕರ ಕಛೇರಿ. ಜಾನುವಾರು ಸಂವರ್ಧನಾ ಕ್ಷೇತ್ರ ಹೆಸರಘಟ್ಟ, ಬೆಂಗಳೂರು-89

ಸಂಖ್ಯೆ:ಉನಿ:ಜಾಸಂಕ್ಷೇ:ಸಿ3:ಅಮಫ:ಹರಾಜು:2007-08, ದಿನಾಂಕ: 14ನೇ ನವೆಂಬರ್ 2007

ಅಮರಾಯಿ ಫಸಲಿನ ಹರಾಜು ಇಸ್ತಿಹಾರ್

ಈ ಮೂಲಕ ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ ಈ ಕ್ಷೇತ್ರದ 2007-08ನೇ ಸಾಲಿನ ಹುಣಸೆ ಫಸಲು-304 ಮರ, ಹೊಂಗೆ ಫಸಲು-65 ಮರ, ಹಿಪ್ಪೆ ಫಸಲು - 14 ಮರ ಬೇವಿನ ಫಸಲು–189 ಮರ, ತೆಂಗಿನ ಫಸಲು–292 ಮರ, ಹಲಸಿನ ಫಸಲು–15 ಮರ ಹಾಗೂ ಮಾವಿನ ಫಸಲು - 10 ಮರಗಳ ಫಸಲುಗಳನ್ನು ದಿನಾಂಕ: 07.01.2008 ಸೋಮವಾರದಂದು ಬೆಳಿಗ್ಗೆ 11.00 ಗಂಟೆಯ ಮೇಲೆ ಜಾನುವಾರು ಸಂವರ್ಧನಾ ಕ್ಷೇತ್ರ, ಹೆಸರಘಟ್ಟದ ಈ ಕಛೇರಿ ಆವರಣದಲ್ಲಿ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಬಹಿರಂಗವಾಗಿ ಹರಾಜು ಮಾಡಲಾಗುವುದು.

ನಿಬಂಧನೆಗಳು:

1. ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮೊದಲು ರೂಪಾಯಿ 2,000-00 (ರೂಪಾಯಿ ಎರಡು ಸಾವಿರ ಮಾತ್ರ) ಗಳನ್ನು ನಗದು ರೂಪದಲ್ಲಿ ಹರಾಜು ನಡೆಸುವ ಅಧಿಕಾರಿಗಳಲ್ಲಿ ಮುಂಗಡ ಠೇವಣಿ ಸಂದಾಯ ಮಾಡಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು.
2. ಹರಾಜಿನಲ್ಲಿ ಯಶಸ್ವಿಯಾಗದವರ ಠೇವಣಿ ಹಣವನ್ನು ಹರಾಜು ಮುಗಿದ ನಂತರ ಹಿಂದಿರುಗಿಸಲಾಗುವುದು.
3. ಹರಾಜು ಮುಗಿದ ಕೂಡಲೇ ಯಶಸ್ವಿ ಹರಾಜುದಾರರು ಹರಾಜಿನ ಪೂರ್ಣ ಮೊಬಲಗು ಹಾಗೂ ಇತರೆ ತೆರಿಗೆಯನ್ನು ಪಾವತಿ ಮಾಡಿ ರಶೀದಿ ಪಡೆಯತಕ್ಕದ್ದು. ತಪ್ಪಿದ್ದಲ್ಲಿ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಪುನಃ ಹರಾಜು ಮಾಡಲಾಗುವುದು. ಅದರಿಂದ ಆದ ನಷ್ಟದ ಮೊಬಲಗನ್ನು ಮೊದಲನೆಯ ಯಶಸ್ವಿ ಹರಾಜುದಾರರಿಂದಲೇ ರೆವಿನ್ಯೂ ಬಾಕಿಯೆಂದು ಪರಿಗಣಿಸಿ ವಸೂಲಿ ಮಾಡಲಾಗುವುದು. ಲಾಭವೇನಾದರೂ ಬಂದಲ್ಲಿ ಹರಾಜುದಾರರು ಅದಕ್ಕೆ ಅರ್ಹರಾಗುವುದಿಲ್ಲ.
4. ಹರಾಜನ್ನು ಇದೇ ಇಲಾಖೆಯ ಆಯುಕ್ತರು, ಪಶುಪಾಲನಾ ಇಲಾಖೆ, ಕರ್ನಾಟಕ, ಬೆಂಗಳೂರು. ಇವರಿಂದ ಅಥವಾ ಇವರಿಂದ ನೇಮಿಸಲ್ಪಟ್ಟ ಅಧಿಕಾರಿಗಳಿಂದ ಹರಾಜು ನಡೆಸಲಾಗುವುದು. ಮತ್ತು ಹರಾಜಿನ ಯಾವ ಬಗೆಯ ಅಂತಿಮ ನಿರ್ಧಾರವು ಹರಾಜು ನಡೆಸುವ ಅಧಿಕಾರಿಗಳಿಗೆ ಸೇರಿರುತ್ತದೆ.
5. ಹರಾಜಿನಲ್ಲಿ ಕೊಂಡ ಎಲ್ಲಾ ಫಸಲನ್ನು ಎಲ್ಲಾ ವಿಧದಲ್ಲಿಯೂ ಕಾಪಾಡಿಕೊಂಡು ಹೋಗುವ ಜವಾಬ್ದಾರಿಯು ಫಸಲನ್ನು ಕೊಂಡವರಿಗೆ ಸೇರಿರುತ್ತದೆ. ಮತ್ತು ಈ ಬಗ್ಗೆ ಯಾವ ವಿಧವಾದ ದೂರುಗಳನ್ನು ಸ್ವೀಕರಿಸಲಾಗುವುದಿಲ್ಲ. ಹಾಗೂ ಈ ಫಸಲನ್ನು ಅಂದರೆ ಹರಾಜು ನಡೆದ ದಿನಾಂಕದಿಂದ 31.12.2008 ರವರೆಗೆ ಅನುಭವಿಸುವುದಕ್ಕೆ ಮಾತ್ರ ಅರ್ಹರಾಗಿರುತ್ತಾರೆ.
6. ಸರ್ಕಾರದ ಸ್ವತ್ತಿಗೆ ಯಾವ ವಿಧವಾದ ನಷ್ಟವೇನಾದರೂ ಉಂಟಾದರೆ ಹರಾಜುದಾರನೇ ತಮ್ಮ ಸ್ವಂತ ಖರ್ಚಿನಿಂದ ಸರಿಪಡಿಸಿಕೊಡಬೇಕು.
7. ಹರಾಜಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು ಭಾಗವಹಿಸುವಂತಿಲ್ಲ.
8. ಹರಾಜಿನ ಇತರೆ ಮಾಹಿತಿಗಳು ಬೇಕಾದ ಪಕ್ಷದಲ್ಲಿ ಈ ಕಛೇರಿಯ ಎಲ್ಲಾ ಕೆಲಸದ ದಿನಗಳಲ್ಲಿ ಕೇಳಿ ಪಡೆದುಕೊಳ್ಳಬಹುದು.

ಡಾ:ಎಸ್. ಮಾರಿಮುತ್ತು

ಪಿ.ಆರ್. 701

ಉಪ ನಿರ್ದೇಶಕರು ಜಾನುವಾರು ಸಂವರ್ಧನಾ
ಕ್ಷೇತ್ರ ಹೆಸರುಘಟ್ಟ, ಬೆಂಗಳೂರು-89

ಕರ್ನಾಟಕ ಲೋಕ ಸೇವಾ ಆಯೋಗ

ಲೋಕ ಸೇವಾ ಆಯೋಗದ ಕಛೇರಿ ಉದ್ಯೋಗ ಸೌಧ, ಬೆಂಗಳೂರು,

ಅಧಿಸೂಚನೆ

ಸಂಖ್ಯೆ: ಇ(3) 169/2007–08/ಪಿಎಸ್‌ಸಿ, ದಿನಾಂಕ: 07ನೇ ನವೆಂಬರ್ 2007

ಉಲ್ಲೇಖ: 1) ಅಧಿಸೂಚನೆ ಸಂಖ್ಯೆ: ಇ(3) 406/2005–06/ಪಿಎಸ್‌ಸಿ, ದಿನಾಂಕ: 12.12.2005
2) ಅಧಿಸೂಚನೆ ಸಂಖ್ಯೆ: ಇ(3) 456/2006–07/ಪಿಎಸ್‌ಸಿ, ದಿನಾಂಕ: 23.02.2007
3) ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 26 ಸೆಹಿಮ 2002, ದಿನಾಂಕ: 11.04.2003
4) ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ–ಪತ್ರ ಸಂಖ್ಯೆ:ಡಿಜೆಸಿ 4720/07 ದಿನಾಂಕ: 21.08.2007 (ಸ್ವೀಕೃತಿ ದಿನಾಂಕ: 23.08.2007)
5) ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾಸನ–ಪತ್ರ ಸಂಖ್ಯೆ:ಆಡಳಿತ 2340/2418/2007 ದಿನಾಂಕ: 23.08.2007 (ಸ್ವೀಕೃತಿ ದಿನಾಂಕ: 25.08.2007)
6) ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ್–ಪತ್ರ ಜಾವಕ ಸಂಖ್ಯೆ:1813/2007 ದಿನಾಂಕ: 25.08.2007 (ಸ್ವೀಕೃತಿ ದಿನಾಂಕ: 31.08.2007)
7) ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಉಡುಪಿ–ಪತ್ರ ಸಂಖ್ಯೆ:ಆಡಳಿತ–1 4593/2007 ದಿನಾಂಕ: 29.08.2007 (ಸ್ವೀಕೃತಿ ದಿನಾಂಕ: 31.08.2007)
8) ಕರ್ನಾಟಕ ಸರ್ಕಾರದ ಸಚಿವಾಲಯ–ಪತ್ರ ಸಂಖ್ಯೆ:ಸಿಆಸುಇ 37 ಆಕಿಸೇ 2007 ದಿನಾಂಕ: 01.09.2007 (ಸ್ವೀಕೃತಿ ದಿನಾಂಕ: 01.09.2007)

9) ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು–ಪತ್ರ ಸಂಖ್ಯೆ:4122/Admn/2007
ದಿನಾಂಕ: 10.09.2007 (ಸ್ವೀಕೃತಿ ದಿನಾಂಕ: 14.09.2007)
10) ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾವೇರಿ–ಪತ್ರ ಸಂಖ್ಯೆ:2135/2007
ದಿನಾಂಕ: 11.09.2007 (ಸ್ವೀಕೃತಿ ದಿನಾಂಕ: 14.09.2007)
11) ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ–ಪತ್ರ ಸಂಖ್ಯೆ:ADM-DJS-11789/07
ದಿನಾಂಕ: 21.09.2007 (ಸ್ವೀಕೃತಿ ದಿನಾಂಕ: 25.09.2007)
12) ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ–ಪತ್ರ ಸಂಖ್ಯೆ:3314/2007
ದಿನಾಂಕ: 20.09.2007 (ಸ್ವೀಕೃತಿ ದಿನಾಂಕ: 27.09.2007)
13) ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು–ಪತ್ರ ಜಿ.ಟಿ.ಸಂಖ್ಯೆ:3846/2007
ದಿನಾಂಕ: 21.09.2007 (ಸ್ವೀಕೃತಿ ದಿನಾಂಕ: 27.09.2007)
14) ಅಧಿಸೂಚನೆ ಸಂಖ್ಯೆ:ಇ(3) 161/2007–08/ಪಿಎಸ್‌ಸಿ, ದಿ:18–10–2007.

